
ಜನಮನದ ದನಿ

# ಪ್ರಜೋದಯ

ಸಂಪಾದಕ : ಜಿ.ಆರ್. ಕೆಂಚೇಗೌಡ

ಭಾರತದ ಸಂಜಾತ ಮೊನಾಂಕ್ ಪಟೇಲ್ ಅವರು ಫೆ.7ರಂದು ಆರಂಭವಾಗುವ ಟಿ-20 ವಿಶ್ವಕಪ್ ಟೂರ್ನಿಯಲ್ಲಿ 15 ಆಟಗಾರರ ಅಮೆರಿಕ ತಂಡವನ್ನು ಮುನ್ನಡೆಸಲಿದ್ದಾರೆ.



31 ಜನವರಿ 2026 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 317 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಮಕ್ಕಳು ದಿನಪತ್ರಿಕೆ ಓದುವುದನ್ನು ರೂಢಿಸಿಕೊಳ್ಳುವುದು ಹೇಗೆ...? » 2



ಸೇವೆಗಿಂತ ಪ್ರೀತಿ ಮುಖ್ಯ ಎಂಬ ತತ್ವ ಪಾಲಿಸೋಣ » 3





ಆಟಕ್ಕುಂಟು ಲೆಕ್ಕಕ್ಕಿಲ್ಲದ ಬಿಜೆಪಿ ಸಂಸದರು : ಡಿ.ಕೆ.ಶಿ. » 4

# ವಿಧಾನಪರಿಷತ್‌ನಲ್ಲಿ ಭರಪೂರವಾದ-ಪ್ರತಿವಾದ

## ರಾಜ್ಯಪಾಲರ ಭಾಷಣ ವಂದನಾ ನಿರ್ಣಯ | ನರೇಗಾ ಅಂಕುಶಕ್ಕೆ ಕಾಂಗ್ರೆಸ್ ಆಕ್ರೋಶ

• ಪ್ರಜೋದಯ ವರದಿ

**ಬೆಂಗಳೂರು:** ಯಾವುದೇ ಚರ್ಚೆ ನಡೆಯದೆ ಎರಡು ದಿನಗಳ ಕಲಾಪ ಮುಗಿಸಿದ್ದ ವಿಧಾನ ಪರಿಷತ್ತು ಶುಕ್ರವಾರ ರಾಜ್ಯಪಾಲರ ಕರ್ತವ್ಯ, ಒಕ್ಕೂಟ ವ್ಯವಸ್ಥೆ, ಹಣಕಾಸು ಹಂಚಿಕೆ ಕುರಿತು ವಾದ- ಪ್ರತಿವಾದಗಳಿಗೆ ವೇದಿಕೆಯಾಯಿತು.

ಮಂಗಳವಾರದ ಕಲಾಪದ ವೇಳೆ ತಾವು ಅರ್ಧಕ್ಕೆ ನಿಲ್ಲಿಸಿದ್ದ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯನ್ನು ಕಾಂಗ್ರೆಸ್‌ನ ಐವನ್ ಡಿಸೋಜ ಶುಕ್ರವಾರ ಮುಂದುವರೆಸಿದರು. ಕೇಂದ್ರ ಸರ್ಕಾರದ ವಿರುದ್ಧ ಟೀಕೆ ಮಾಡಲು ರಾಜ್ಯಪಾಲರ ಭಾಷಣವನ್ನು ರಾಜ್ಯ ಸರ್ಕಾರ ಬಳಸಿಕೊಂಡಿದೆ ಎಂದು ಆರೋಪಿಸಲಾಗುತ್ತಿದೆ. ಆದರೆ, ಕರ್ನಾಟಕದ ಸಂದರ್ಭದಲ್ಲಿಯೇ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ಹಿಂದೆ ಹಲವು ಬಾರಿ ಕೇಂದ್ರ ಸರ್ಕಾರವನ್ನು ಟೀಕಿಸಿದ್ದಾರೆ. ಹೀಗಾಗಿ ನರೇಗಾ ಕುರಿತಾಗಿ ಕೇಂದ್ರದ ನಡೆಯನ್ನು ಟೀಕಿಸುವುದು ಅಪರಾಧವೇನೂ ಅಲ್ಲವೆಂದರು.

ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು ರಾಜ್ಯಕ್ಕೆ ಅನ್ಯಾಯ ಮಾಡುತ್ತಲೇ ಇದೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಕ್ಕೆ ಅನ್ಯಾಯವಾದಾಗ ರಾಜ್ಯಪಾಲರು ಸರ್ಕಾರದ ಮುಖ್ಯಸ್ಥ



ರಾಗಿ ಈ ಬಗ್ಗೆ ದನಿ ಎತ್ತಬೇಕಾದುದು ಅವರ ಕರ್ತವ್ಯ. ಲೋಕಸಭೆ-ರಾಜ್ಯಸಭೆಯಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಸಂಸದರಿಗೂ ಇಂತಹದ್ದೇ ಗುರುತರ ಹೊಣೆ ಇದೆ. ಆದರೆ, ರಾಜ್ಯದ ಸಂಸದರು ಒಮ್ಮೆಯೂ ರಾಜ್ಯಕ್ಕಾಗುತ್ತಿರುವ ಅನ್ಯಾಯದ ಬಗ್ಗೆ ಮಾತನಾಡಿಲ್ಲ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವು ದನಿ ಎತ್ತಲೇಬೇಕಾಗುತ್ತದೆ ಎಂದು ಪ್ರತಿಪಾದಿಸಿದರು.

ಚರ್ಚೆಯಲ್ಲಿ ಭಾಗಿಯಾದ ಛಲವಾದಿ ನಾರಾಯಣಸ್ವಾಮಿ ಅವರು, ನರೇಗಾ ಯೋಜನೆ ಅಡಿ ಬಿಡುಗಡೆಯಾದ ಎಲ್ಲಾ ಹಣವೂ ನುಂಗಪ್ಪಗಳ ಜೇಬಿಗೆ ಹೋಗುತ್ತಿತ್ತು. ನುಂಗಪ್ಪಗಳ ಹಾವಳಿಗೆ ಕಡಿವಾಣ ಹಾಕಬೇಕೆಂದೇ ವಿಬಿ ಜಿ ರಾಮ್ ಜಿ ಜಾರಿಗೆ ತರಲಾಗಿದೆ. ಗಾಂಧೀಜಿ ಅವರ ರಾಮ ರಾಜ್ಯವನ್ನು ನನಸು ಮಾಡಲು ಜಿ ರಾಮ್ ಜಿ ಬಂದಿದ್ದಾನೆ. ಅದಕ್ಕೆ ಸಂಘಪ್ಪನನ್ನು ಏಕೆ ಪ್ರಶ್ನಿಸಬೇಕು. ಪತ್ರಿಕೆಗಳಿಗೆ ಗಾಂಧೀಜಿಸಂಘಪ್ಪನ ಜಾಹೀರಾತು ನೀಡಲು ಸರ್ಕಾರ ಹಣ ವೆಚ್ಚ ಮಾಡುತ್ತಿದೆ ಎಂದು ಸರ್ಕಾರವನ್ನು ತರಾಟೆಗೆ ತೆಗೆದು ಕೊಂಡರು.

ರಾಷ್ಟ್ರಪತಿ ಅವರ ಅಂಕಿತದ ಬಳಿಕ ಜಾರಿಗೆ ಬಂದಿರುವ ಕಾಯ್ದೆಯ ವಿರುದ್ಧದ ಅಂಶಗಳು ಭಾಷಣದಲ್ಲಿ ಇದ್ದವು. ಅದನ್ನು ಓದಿದರೆ ರಾಷ್ಟ್ರಪತಿಗೆ ಅಗೌರವ ತೋರಿದಂತಾಗುತ್ತಿತ್ತು. ಹೀಗಾಗಿ ರಾಜ್ಯಪಾಲರು ಆ ಅಂಶಗಳನ್ನು ಓದಿಲ್ಲವೆಂದು ಸಮರ್ಥಿಸಿಕೊಂಡರು.

ಕಾಂಗ್ರೆಸ್‌ನ ಕೆ.ಶಿವಕುಮಾರ್ ಅವರು ಮಾತನಾಡಿ, ಅಟಲ್ ಬಿಹಾರಿ ವಾಜಪೇಯಿ ಅವರ ಸರ್ಕಾರದಲ್ಲಿ ಸಂವಿಧಾನದ ಪರಿಷ್ಕರಣೆ ಆಗಬೇಕು » ನಾಲ್ಕನೇ ಪುಟದಲ್ಲಿ

### ಜಿಎಸ್‌ಟಿ ಸಭೆಗೆ ಸಮರ್ಥ ಸಚಿವರು ಹಾಜರಾಗಿದ್ದಾರೆ

ಐವನ್ ಡಿಸೋಜ ಅವರು ಮಾತನಾಡಿ, ಕೇಂದ್ರ ಸರ್ಕಾರವು ರಾಜ್ಯದಿಂದ 1.60 ಲಕ್ಷ ಕೋ.ರೂ. ಜಿಎಸ್‌ಟಿ ಸಂಗ್ರಹಿಸಿದ್ದರೂ ನಮಗೆ ಅದರಲ್ಲಿ ಅತ್ಯಂತ ಕಡಿಮೆ ಪಾಲು ದೊರೆ ಯುತ್ತಿದೆ ಎನ್ನುತ್ತಿದ್ದಂತೆ ಆಕ್ಷೇಪ ಎತ್ತಿದ ಬಿಜೆಪಿಯ ಎಚ್.ವಿಶ್ವನಾಥ್, ನಿಮ್ಮ ಮುಖ್ಯಮಂತ್ರಿ ಜಿಎಸ್‌ಟಿ ಸಭೆಗೆ ಒಮ್ಮೆಯೂ ಹಾಜರಾಗಿಲ್ಲ, ಸಭೆಗೆ ಹಾಜರಾಗದೆ ಇಲ್ಲಿ ಆರೋಪ ಮಾಡುವುದರಲ್ಲಿ ಅರ್ಥವಿಲ್ಲ ಎಂದರು. ಸಚಿವ ಪ್ರಿಯಾಂಕ್ ಖರ್ಗೆ ಅವರು ಪ್ರತಿ ಕ್ರಿಯಿಸಿ, ಜಿಎಸ್‌ಟಿ ಮಂಡಳಿ ಸಭೆಗೆ ಮುಖ್ಯ ಮಂತ್ರಿಯೇ ಹಾಜರಾಗಬೇಕೆಂಬ ನಿಯಮ ವಿಲ್ಲ. ಮುಖ್ಯಮಂತ್ರಿ ತಮ್ಮ ಪರವಾಗಿ ಸಮರ್ಥ ಸಚಿವರನ್ನು ನಿಯೋಜಿಸಬಹುದು. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯ ಮಂತ್ರಿ ಆಗಿದ್ದಾಗ ಬಸವರಾಜ ಬೊಮ್ಮಾಯಿ ಅವರನ್ನು ಜಿಎಸ್‌ಟಿ ಮಂಡಳಿ ಸಭೆಗೆ ನಿಯೋ ಜನೆ ಮಾಡಿದ್ದರು. ಅದೇ ರೀತಿ ಸಿದ್ದರಾಮಯ್ಯ ಅವರು ಸಚಿವ ಕೃಷ್ಣ ಬೈರೇಗೌಡ ಅವರನ್ನು ನಿಯೋಜನೆ ಮಾಡಿದ್ದಾರೆಂದು ತಿರುಗೇಟು ನೀಡಿದರು. ವಿಶ್ವನಾಥ್ ಅವರು ಸುಮ್ಮನೆ ಕುಳಿತರು.

## ಇಂದು-ನಾಳೆ ಅಡಿಬೈಲು ರಂಗನಾಥ ಸ್ವಾಮಿ ಜಾತ್ರಾ ಮಹೋತ್ಸವ



• ಪ್ರಜೋದಯ ವರದಿ

**ಆಲೂರು :** ತಾಲ್ಲೂಕಿನ ಅಡಿಬೈಲು ಶ್ರೀ ರಂಗನಾಥ ಸ್ವಾಮಿ ಹಾಗು ಬಿಂದಿಗಮ್ಮನವರ ಜಾತ್ರಾ ಮಹೋತ್ಸವವು ಇಂದು ಮತ್ತು ನಾಳೆ ನಡೆಯಲಿದೆ.

ಜ.31 ರಂದು ಭರತ್ತೂರಿನಲ್ಲಿ ಬಿಂದಿಗಮ್ಮನವರ ಜಾತ್ರೆ ಹಾಗು ಫೆಬ್ರವರಿ 1 ರಂದು ಬೆಟ್ಟದ ಮೇಲಿನ ಶ್ರೀ ರಂಗನಾಥ ಸ್ವಾಮಿಯವರ ಜಾತ್ರೆ, ಉತ್ಸವಗಳು ನಡೆಯಲಿದೆ.

ಸಾರ್ವಜನಿಕರು ಮತ್ತು ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗುವಂತೆ ಮನವಿ ಮಾಡಲಾಗಿದೆ.

## ಹಿಂಬಾಲಕರಿಗಷ್ಟೇ ಕಾಮಗಾರಿ ಗುತ್ತಿಗೆ: ಬಿ.ಶಿವರಾಮ್ ಆರೋಪ

• ಪ್ರಜೋದಯ ವರದಿ



**ಬೇಲೂರು:** ಶಾಸಕ ಹೆಚ್.ಕೆ. ಸುರೇಶ್ ಅವರು ತಮ್ಮ ಹಿಂಬಾಲಕರಿಗೆ ಗುತ್ತಿಗೆ ನೀಡಲು ನಡೆಸುತ್ತಿರುವ ಪ್ರಯತ್ನ ವನ್ನು ಕ್ಷೇತ್ರ ಅಭಿವೃದ್ಧಿಗೆ ಹಾಕುತ್ತಿಲ್ಲ. ಗುತ್ತಿಗೆ, ರಿಯಲ್ ಎಸ್ಟೇಟ್ ಪರಿಣತ ರಿಂದ ಯಾವ ಪ್ರಯೋಜ ನವಿಲ್ಲವೆಂದು ಮಾಜಿ ಸಚಿವ ಬಿ.ಶಿವರಾಮ್ ಅವರು ಗಂಭೀರ ಆರೋಪ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಬೇಲೂರು ಪುರಸಭೆ ವ್ಯಾಪ್ತಿಯಲ್ಲಿ 10 ಕೋ.ರೂ. ಅನುದಾನದಲ್ಲಿ ರಸ್ತೆ, ಚರಂಡಿ ಕಾಮಗಾರಿ ನಡೆಯುತ್ತಿದ್ದು, ಬಹುತೇಕ ಕೆಲಸಗಳನ್ನು ಶಾಸಕ ಹೆಚ್.ಕೆ.ಸುರೇಶ್ ತಮ್ಮ ಹಿಂಬಾಲಕರಿಗೆ ನೀಡಿ ದ್ದಾರೆ. ಅಧಿಕಾರಿಗಳನ್ನು ಹೆದರಿಸಿ ಸಿಂಗಲ್ ಟೆಂಡರ್ ನಡೆಯುವಂತೆ ನೋಡಿ ಕೊಳ್ಳುತ್ತಿದ್ದಾರೆ. ಕಳಪೆ ಕಾಮ ಗಾರಿ ಮಾಡುತ್ತಿರುವುದು ಮಾತ್ರವ ಲ್ಲದೇ ಕೆಲಸ ಮುಗಿಯುವ ಮೊದಲೇ ಬಿಲ್ ಪಡೆಯುತ್ತಿದ್ದಾರೆಂದು ದೂರಿ ದರು.

ಪಟ್ಟಣದ ಬಿಕ್ಕೋಡು ರಸ್ತೆಯಲ್ಲಿ 3.5 ಕೋ.ರೂ., ಗೆಂಡೇಹಳ್ಳಿ ರಸ್ತೆ 3.5 ಕೋ.ರೂ., ವೈಕುಂಠ ಬೀದಿ 1 ಕೋ.ರೂ., ದೇವಾಂಗ ಬೀದಿಯಲ್ಲಿ 1 ಕೋ.ರೂ. ವೆಚ್ಚದ ಕಾಮ ಗಾರಿ ನಡೆಯುತ್ತಿದೆ. ಪುರಸಭೆ ವ್ಯಾಪ್ತಿಯಲ್ಲಿ ಚರಂಡಿ, ರಸ್ತೆ ಅವ್ಯವಸ್ಥೆ ಯಿಂದ ಸಾರ್ವಜನಿಕರು ಪರದಾಡು ತ್ತಿದ್ದಾರೆ. ಪುರಸಭೆ ಅಧ್ಯಕ್ಷರು ಮತ್ತು ಸದಸ್ಯರ ಗಮನಕ್ಕೆ ತಾರದೆ ಅಧಿ ಕಾರಿಗಳನ್ನು ಹೆದರಿಸಿ ತಮಗೆ ಬೇಕಾದ ರೀತಿ ಕಾಮಗಾರಿ ಮಾಡುತ್ತಿದಾರೆ. ಈ ಬಗ್ಗೆ ಅಧಿಕಾರಿಗಳ ವಿರುದ್ಧ ದೂರು ನೀಡುವುದಾಗಿ ತಿಳಿಸಿದರು.

ಪುರಸಭೆ ವ್ಯಾಪ್ತಿಯ ಗೆಂಡೇಹಳ್ಳಿ ರಸ್ತೆ ಕಾಮಗಾರಿಯನ್ನು ನನ್ನ ಬೆಂಬಲಿಗರು ಮಾಡುತ್ತಿದ್ದಾರೆಂಬ ಮಾತುಗಳು ಕೇಳಿ ಬಂದಿವೆ. ಈ ಆರೋಪ ಶುದ್ಧ ಸುಳ್ಳು. ಒಂದು ವೇಳೆ ನನ್ನ ಬೆಂಬಲಿಗರೇ ಕೆಲಸ ಮಾಡುತ್ತಿದ್ದರೆ ಮರು ಟೆಂಡರ್ ನಡೆಸಲಿ. ಗುತ್ತಿಗೆಯೊಂದಿಗೆ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿರುವ ಇಂತಹವರಿಂದ ಅಭಿವೃದ್ಧಿ ಹೇಗೆ ಸಾಧ್ಯವೆಂದು ಪ್ರಶ್ನಿಸಿದರು.

## ಮನೆ ಮುಂದೆ ಕಸ ಸುರಿದ ಪಾಲಿಕೆ ಸಿಬ್ಬಂದಿ: ವಾಗ್ವಾದ

• ಪ್ರಜೋದಯ ವರದಿ

**ಹಾಸನ:** ರಸ್ತೆ ಬದಿ ಕಸ ಸುರಿದು ಅನೈರ್ಮಲ್ಯಕ್ಕೆ ಎಡೆ ಮಾಡಿ ಕೊಡುತ್ತಿದ್ದ ಕುಟುಂಬವೊಂದಕ್ಕೆ ಬಿಸಿ ಮುಟ್ಟಿಸಿರುವ ಮಹಾನಗರ ಪಾಲಿಕೆ ಸಿಬ್ಬಂದಿ ಒಂದು ಲೋಡ್ ತ್ಯಾಜ್ಯವನ್ನು ಮನೆ ಮುಂದೆ ಸುರಿದಿರುವ ಘಟನೆ ಉದಯಗಿರಿ ಬಡಾವಣೆಯಲ್ಲಿ ಶುಕ್ರವಾರ ನಡೆದಿದೆ.

ನಗರ ಸ್ವಚ್ಛತೆಗೆ ಮಹಾನಗರ ಪಾಲಿಕೆ ಹಲವು ದಿಟ್ಟ ಕ್ರಮಗಳನ್ನು ಕೈಗೊಂಡಿದೆ. ಹಸಿ ಹಾಗು ಒಣ ಕಸ ಪ್ರತ್ಯೇಕವಾಗಿ ನೀಡುವಂತೆ ಸಾರ್ವಜನಿಕರಿಗೆ ಸೂಚನೆ ನೀಡಲಾಗಿದೆ. ರಸ್ತೆ ಬದಿ ಕಸ ಸುರಿಯುವುದನ್ನು ತಪ್ಪಿಸಲು ಕಮ್ಯೂನಿಟಿ ಸದಸ್ಯರ ನಿಯೋಜಿಸಿದ್ದು, ಆ ಮೂಲಕ ನಗರ ಸೌಂದರ್ಯ ವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ಈ ನಡುವೆಯೂ ಶುಕ್ರವಾರ ಬೆಳಿಗ್ಗೆ ಉದಯಗಿರಿಯ ಕುಟುಂಬವೊಂದರ ಮಹಿಳೆ ರಸ್ತೆಗೆ ಕಸ ಎಸೆದಿರುವುದನ್ನು ಗಮನಿಸಿದ ಸಿಬ್ಬಂದಿ ಆಶಾ ಅವರು ಕೂಡಲೇ ಪಾಲಿಕೆ ಮೇಲಾಧಿಕಾರಿಗಳಿಗೆ ಮಾಹಿತಿ



ನೀಡಿದ್ದಾರೆ.

ಆಗ ಒಂದು ಟಿಪ್ಪರ್ ತ್ಯಾಜ್ಯದೊಂದಿಗೆ ಮನೆ ಮುಂದೆ ಬಂದ ಪೌರ ಕಾರ್ಮಿಕರ ಮನೆಯ ಗೇಟ್ ಬಾಗಿಲು ತೆಗೆದು ಡಂಪ್ ಮಾಡಿದ್ದಾರೆ. ಈ ವೇಳೆ ಕುಟುಂಬದ ಮಹಿಳೆಯರು ಹಾಗು ಪಾಲಿಕೆ ಸಿಬ್ಬಂದಿ ನಡುವೆ ಜೋರು ವಾಗ್ವಾದ ನಡೆದಿದೆ. ನಂತರ ಮನೆ ಮಾಲೀಕರಿಂದ 1 ಸಾವಿರ ರೂ. ದಂಡ ಪಾವತಿಸಿಕೊಂಡು ಕಸವನ್ನು ಟಿಪ್ಪರ್‌ಗೆ ತುಂಬಿಕೊಂಡು ವಾಪಾಸ್ಸಾಗಿದ್ದಾರೆ.

# ಮಾರ್ಚ್ ಅಂತ್ಯಕ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾಮಗಾರಿ ಪೂರ್ಣ

## ಶಾಸಕ ಸ್ವರೂಪ್ ಪ್ರಶ್ನೆಗೆ ವೈದ್ಯಕೀಯ ಸಚಿವರ ಉತ್ತರ | ಶೀಘ್ರ ಕಾರ್ಯಾರಂಭ ಭರವಸೆ

• ಪ್ರಜೋದಯ ವರದಿ

**ಹಾಸನ:** ನಗರದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಕಾಮಗಾರಿಯನ್ನು ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳಿಸುವುದಾಗಿ ವೈದ್ಯಕೀಯ ಶಿಕ್ಷಣ ಸಚಿವ ಡಾ|| ಶರಣ ಪ್ರಕಾಶ್ ಪಾಟೀಲ್ ಅವರು ಭರವಸೆ ನೀಡಿದರು.

ವಿಧಾನ ಮಂಡಲ ವಿಶೇಷ ಅಧಿವೇಶನದಲ್ಲಿ ಶುಕ್ರವಾರ ಶಾಸಕ ಹೆಚ್.ಪಿ.ಸ್ವರೂಪ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾಮಗಾರಿ 2018-19ನೇ ಸಾಲಿನಲ್ಲಿ 50 ಕೋ. ರೂ. ವೆಚ್ಚದಲ್ಲಿ ಆರಂಭವಾಯಿತು. 2025 ಸೆ.22ರಂದು ಕಾಮಗಾರಿ ಮೊತ್ತ 63.34 ಕೋ.ರೂ.ಗೆ ಪರಿ ಷ್ಕೃತಗೊಂಡಿದೆ. ಸಿವಿಲ್ ಕಾಮಗಾರಿ ಪ್ರಗತಿಯಲ್ಲಿದೆ. ನಿಗದಿತ ಗಡುವಿ ನೊಳಗೆ ಕೆಲಸ ಮುಗಿಸಲು ಗುತ್ತಿಗೆ ದಾರರಿಗೆ ಸೂಚಿಸಲಾಗಿದೆ ಎಂದರು.



2025ರ ಡಿ.9 ರಂದು ಕಟ್ಟಡಕ್ಕೆ ಅಗತ್ಯ ಕಾಮಗಾರಿ ಕೈಗೊಳ್ಳಲು 21 ಕೋ. ರೂ. ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿದೆ. 250 ಹಾಸಿಗೆ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡದಲ್ಲಿ ಮೊದಲ ಹಂತದಲ್ಲಿ 150 ಹಾಸಿಗೆ ಸಾಮರ್ಥ್ಯಕ್ಕೆ ಅನುಗುಣವಾಗಿ ಕಾರ್ಡಿಯಾಲಜಿ, ನ್ಯೂರಾಲಜಿ, ನ್ಯೂರೋ ಸರ್ಜರಿ, ಯುರಾಲಜಿ, ಕಾರ್ಡಿಯೊಥೋರಾಸಿಕ್ ಸರ್ಜರಿ ವಿಭಾಗ ಮತ್ತು ಕ್ಯಾತ್‌ಲ್ಯಾಬ್ ಘಟಕ ಆರಂಭಿಸಲು ಅಗತ್ಯವಿರುವ ಉಪಕರಣ ಸೇರಿ ಒಟ್ಟು 23.92 ಕೋ. ರೂ. ಅಂದಾಜು ಮೊತ್ತಕ್ಕೆ ಅನುಮೋದನೆ ದೊರೆತಿದೆ. ಕ್ಯಾತ್ ಲ್ಯಾಬ್ ಕಾರ್ಡಿಯಾಕ್ ಘಟಕ ಆರಂಭಿಸಲು 9.42 ಕೋ.ರೂ. ನೀಡಲಾಗಿದೆ. ಆಸ್ಪತ್ರೆಗೆ ಅಗತ್ಯವಿರುವ ಹುದ್ದೆಗಳ ಸೃಜನೆ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದರು.

ಆಸ್ಪತ್ರೆ ಕಾರ್ಯಾರಂಭ ಯಾವಾಗ ಎಂಬ ಶಾಸಕರ ಪ್ರಶ್ನೆಗೆ ಉತ್ತರಿಸಿದ ಅವರು, ವೈದ್ಯಕೀಯ ಉಪಕರಣ ಅಳವಡಿಸುವ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ವಿವಿಧ ಹುದ್ದೆಗಳನ್ನು ಸೃಜನೆ ಮಾಡಿದ ನಂತರ ಕಾರ್ಯಾರಂಭ ಮಾಡಲಾಗುವುದೆಂದರು.

» ನಾಲ್ಕನೇ ಪುಟದಲ್ಲಿ



### ಕಾಡಾನೆ-ಮಾನವ ಸಂಘರ್ಷ ತಪ್ಪಿಸಿ

ಮಲೆನಾಡು ಭಾಗದಲ್ಲಿ ಕಾಡಾನೆ ಹಾವಳಿ ಮಿತಿ ಮೀರಿದ್ದು, ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಅವರು ಸರ್ಕಾರವನ್ನು ಒತ್ತಾಯಿಸಿದರು.

ಹಲವು ದಶಕಗಳಿಂದ ಕ್ಷೇತ್ರದಲ್ಲಿ ಕಾಡಾನೆ-ಮಾನವ ಸಂಘರ್ಷದಿಂದ ಕಳೆದ ಹತ್ತು ವರ್ಷಗಳಲ್ಲಿ 85ಕ್ಕೂ ಹೆಚ್ಚು ಜನರು ಮತ್ತು ಹತ್ತಾರು ಕಾಡಾನೆಗಳು ಮೃತಪಟ್ಟಿವೆ. ಸಂಘರ್ಷವನ್ನು ಕೊನೆಗಾಣಿಸಬೇಕೆಂದು ಈಗಾಗಲೇ ಮುಖ್ಯಮಂತ್ರಿ, ಅರಣ್ಯ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಮಾಡಿದರೂ ಶಾಶ್ವತ ಪರಿಹಾರ ಕಂಡುಕೊಳ್ಳಲು ವಿಫಲವಾಗಿವೆ. ಕೂಡಲೇ ಸಚಿವರು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯರ ಅಭಿಪ್ರಾಯ ಪಡೆದು ಕ್ರಮ ಕೈಗೊಳ್ಳಬೇಕೆಂದರು.

ಹೇಮಾವತಿ, ಎತ್ತಿನಹೊಳೆ ನದಿಗಳಿಂದ ಅಕ್ಕಪಕ್ಕದ ಜಿಲ್ಲೆಗಳಿಗೆ ನೀರು ಪೂರೈಕೆಯಾಗುತ್ತಿದೆ. ಆದರೆ, ಕಾಲುವೆಗಳು ದುರಸ್ತಿಗೊಳಗಾಗಿರುವುದರಿಂದ ನದಿ ನೀರು ಹರಿಯಲು ತೊಂದರೆಯಾಗಿ ಪೋಲಾಗುತ್ತಿರುವುದರಿಂದ ರೈತರು ಬಳಸಲು ಆಗುತ್ತಿಲ್ಲ. ಯಗಚಿ ಯೋಜನೆಗೆ ರೈತರ ಭೂಮಿ ಸ್ವಾಧೀನಪಡಿಸಿಕೊಂಡು ಇಪ್ಪತ್ತು ವರ್ಷಗಳಾದರೂ ಯಾವುದೇ ಪರಿಹಾರ ನೀಡಿಲ್ಲ. ಕೂಡಲೇ ಸರ್ಕಾರ ಸ್ಪಂದಿಸಿ ಸಹಕರಿಸಬೇಕೆಂದು ಒತ್ತಾಯಿಸಿದರು.

## ಸಾರಿಗೆ ಬಸ್ ಡಿಕ್ಕಿ: ಹೆಡ್‌ಕಾನ್ಸ್‌ಟೇಬಲ್ ಸಾವು



• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಪೊಲೀಸ್ ಹೆಡ್ ಕಾನ್ಸ್ ಟೇಬಲ್ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಪಟ್ಟಣದಲ್ಲಿ ಶುಕ್ರವಾರ ನಡೆದಿದೆ.

ನಗರ ಠಾಣೆಯ ಬೀರಲಿಂಗ (47) ಮೃತರು. ಮಧ್ಯಾಹ್ನ ಊಟಕ್ಕಾಗಿ ಮನೆಗೆ ತೆರಳುತ್ತಿದ್ದ ವೇಳೆ ಎಪಿಎಂಸಿ ಮುಂಭಾಗ ಎದುರುಗಡೆಯಿಂದ ಬಂದ ಸಾರಿಗೆ ಬಸ್ ಡಿಕ್ಕಿಯಾಗಿದೆ. ತೀವ್ರ ರಕ್ತಸ್ರಾವವಾಗಿ ಬೀರಲಿಂಗ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರು ನಗರ ಠಾಣೆಯಲ್ಲಿ ರೈಟರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಈ ಸಂಬಂಧ ದೂರು ದಾಖಲಾಗಿದೆ.

## ಜಿಲ್ಲಾ ಕಾರಾಗೃಹದಲ್ಲಿ ಹುತಾತ್ಮರ ದಿನಾಚರಣೆ: ಶ್ರಮದಾನ

• ಪ್ರಜೋದಯ ವರದಿ

**ಹಾಸನ:** ಹುತಾತ್ಮ ದಿನಾಚರಣೆ ಅಂಗವಾಗಿ ಜಿಲ್ಲಾ ನ್ಯಾಯಾಲಯ, ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾರಾಗೃಹ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಗರದ ಜಿಲ್ಲಾ ಕಾರಾಗೃಹದಲ್ಲಿ ಶ್ರಮದಾನ ಹಮ್ಮಿಕೊಳ್ಳಲಾಗಿತ್ತು.

ಮಹಾತ್ಮ ಗಾಂಧೀಜಿ ಅವರ ಸ್ಮರಣಾರ್ಥ ಸ್ವಚ್ಛ ಭಾರತ್ ಅಭಿಯಾನದಡಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ನ್ಯಾಯಾಧೀಶರಾದ ಹೇಮಾವತಿ ಹಾಗು ಇತರರು ಸ್ವಚ್ಛತಾ ಕಾರ್ಯದಲ್ಲಿ ಭಾಗಿಯಾಗುವ ಮೂಲಕ ರಾಷ್ಟ್ರಪಿತನಿಗೆ ಗೌರವ ಸಲ್ಲಿಸಿದರು.

ಜಿಲ್ಲಾ ಪ್ರಧಾನ ಮತ್ತು ಸತ್ರ



ನ್ಯಾಯಾಧೀಶರಾದ ಹೇಮಾವತಿ ಅವರು ಮಾತನಾಡಿ, ಅಹಿಂಸೆ, ಶಾಂತಿಯಿಂದ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಮಹಾತ್ಮ ಗಾಂಧೀಜಿ ಅವರನ್ನು ಪ್ರತಿಯೊಬ್ಬರು ಸ್ಮರಿಸಬೇಕು. ಗಾಂಧೀಜಿ ಅವರ ರಾಮ ರಾಜ್ಯ ಕನಸು ಸಾಕಾರಗೊಳ್ಳಬೇಕೆಂದರೆ ಪ್ರತಿಯೊಬ್ಬರು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಬೇಕೆಂದರು.

ನಾವು ಆರೋಗ್ಯ ಕಾಪಾಡಿ ಕೊಳ್ಳಬೇಕಾದರೆ ಸ್ವಚ್ಛ ಪರಿಸರ ಮುಖ್ಯ. ಎಲ್ಲೆಂದರಲ್ಲಿ ಕಸ ಬಿಸಾಕುವುದು ಖಂಡನೀಯ. ಎಲ್ಲಾ ಕೆಲಸವನ್ನು ಸರ್ಕಾರವೇ ಮಾಡಲಿ ಎಂದು ಕೈಕಟ್ಟಿ ಕೂರ ಬಾರದು. ಸಾರ್ವಜನಿಕರ ಸಹಭಾಗಿತ್ವವೂ ಮುಖ್ಯವಾಗುತ್ತದೆ. ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರೆ ಇತರರಿಗೆ ಪ್ರೇರಣೆಯಾಗುತ್ತದೆ ಎಂದರು.

ಕಾರಾಗೃಹ ಬಂಧಿವಾಸಿಗಳು ಆಧುನಿಕ ಹೈನುಗಾರಿಕೆಯ ತರಬೇತಿ ಪಡೆಯುವ ಮೂಲಕ ಬಿಡುಗಡೆಯ ನಂತರ ಭವಿಷ್ಯದಲ್ಲಿ ಉತ್ತಮ ಜೀವನ ರೂಪಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

» ನಾಲ್ಕನೇ ಪುಟದಲ್ಲಿ

## ಫೆ.10 ರಂದು ಜನಸ್ಪಂದನಾ-ಬಜೆಟ್ ಪೂರ್ವಭಾವಿ ಸಭೆ

• ಪ್ರಜೋದಯ ವರದಿ

**ಅರಸೀಕೆರೆ :** ನಗರಸಭೆಯ 2026-27ನೇ ಸಾಲಿನ ಕರಡು ಆಯವ್ಯಯ ಪೂರ್ವಭಾವಿ ಹಾಗು ಜನ ಸ್ಪಂದನ ಸಭೆಯು ಜಿಲ್ಲಾಧಿಕಾರಿ ಹಾಗೂ ನಗರಸಭೆಯ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಫೆ.10 ರಂದು ಬೆಳಿಗ್ಗೆ 11 ಗಂಟೆಗೆ ನಗರಸಭೆಯ ಕಚೇರಿ ಆವರಣದಲ್ಲಿ ಏರ್ಪಡಿಸಲಾಗಿದೆ.

ಮಾಜಿ ನಗರಸಭಾ ಸದಸ್ಯರು, ವಿವಿಧ ಸಂಘ-ಸಂಸ್ಥೆಯ ಪ್ರತಿನಿಧಿಗಳು, ಸಾರ್ವಜನಿಕರು, ಪತ್ರಕರ್ತರು ಹಾಗೂ ಹಿರಿಯ ನಾಗರಿಕರುಗಳು ಸಭೆಗೆ ಆಗಮಿಸಿ ಸಲಹೆ, ಸೂಚನೆಗಳನ್ನು ನೀಡುವಂತೆ ಹಾಗೂ ಕುಂದು ಕೊರತೆಗಳನ್ನು ಸಲ್ಲಿಸಬಹುದಾಗಿದೆ ಎಂದು ಪೌರಾಯುಕ್ತರು ತಿಳಿಸಿದ್ದಾರೆ.

## ಹೂವಿನಹಳ್ಳಿ ಕಾವಲು ಸಮೀಪ ಭೀಕರ ಅಪಘಾತ

• ಪ್ರಜೋದಯ ವರದಿ

**ಹಾಸನ:** ನಗರ ಹೊರವಲಯದ ಹೂವಿನಹಳ್ಳಿ ಕಾವಲು ಸಮೀಪದ ಖಾಸಗಿ ರೆಸಾರ್ಟ್ ಬಳಿ ಶುಕ್ರವಾರ ಬೆಳಿಗ್ಗೆ ವೆನ್ಯು ಕಾರು ಹಾಗು ಲೇಲ್ಯಾಂಡ್ ಮಿನಿ ಟ್ರಕ್ ಗೂಡ್ಸ್ ವಾಹನದ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಗೂಡ್ಸ್ ವಾಹನ ಪಲ್ಟಿಯಾಗಿದೆ.

ಭೀಕರ ಅಪಘಾತದಲ್ಲಿ ನಾಲ್ವರು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ವೆನ್ಯು ಕಾರು ಹಾಗು ಲೇಲ್ಯಾಂಡ್ ವಾಹನ ಮುಖಾಮುಖಿ ಡಿಕ್ಕಿಯಾಗಿವೆ. ಅಪಘಾತದ ತೀವ್ರತೆಗೆ ಎರಡೂ ವಾಹನಗಳು ಬಹುತೇಕ ನುಜ್ಜುಗುಜ್ಜಾಗಿದ್ದು, ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.



ಕಾರಿನಲ್ಲಿದ್ದ ಇಬ್ಬರು ಮತ್ತು ಗೂಡ್ಸ್ ವಾಹನದಲ್ಲಿದ್ದ ಇಬ್ಬರು ಸೇರಿ ಒಟ್ಟು ನಾಲ್ವರಿಗೆ ಕೇವಲ ಸಣ್ಣಪುಟ್ಟ ಗಾಯಗಳಾಗಿವೆ. ಗಾಯಾಳುಗಳನ್ನು ತಕ್ಷಣವೇ ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಪಘಾತದಿಂದ ಕೆಲಕಾಲ ರಸ್ತೆ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು. ಕ್ರೇನ್ ಮೂಲಕ ಜಖಂಗೊಂಡ ವಾಹನಗಳನ್ನು ರಸ್ತೆಯಿಂದ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಶ್ರೀ ಶಿವಕುಮಾರ ಸ್ವಾಮೀಜಿ ಪುಣ್ಯ ಸ್ಮರಣೆ ಫೆ.2ರಂದು

• ಪ್ರಜೋದಯ ವರದಿ

**ಹಾಸನ:** ತ್ರಿವಿಧ ದಾಸೋಹಿ ತುಮಕೂರು ಸಿದ್ದಗಂಗಾ ಮಠದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ 7ನೇ ವರ್ಷದ ಪುಣ್ಯ ಸಂಸ್ಮರಣೋತ್ಸವವನ್ನು ಫೆ.2ರ ಸೋಮವಾರ ನಗರದ ಮಹಾವೀರ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವೀರಶೈವ- ಲಿಂಗಾಯತ ವೇದಿಕೆ ರಾಜ್ಯ ಸಮಿತಿ ಸದಸ್ಯ ವಸಂತಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಮಠದ ಕಿರಿಯ ಸ್ವಾಮೀಜಿ ಶ್ರೀ ಶಿವಸಿದ್ದೇಶ್ವರ ಅವರು ಸಾನ್ನಿಧ್ಯ ವಹಿಸಲಿದ್ದಾರೆ. ಮೈಸೂರು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ವೀರಶೈವ-ಲಿಂಗಾಯತ ಮಹಾವೇದಿಕೆ ರಾಜ್ಯಾಧ್ಯಕ್ಷ ಪ್ರಶಾಂತ್ ಕಲ್ಲೂರ್, ಕರುನಾಡ ವಿಜಯ ಸೇನೆ ರಾಜ್ಯಾಧ್ಯಕ್ಷ ದೀಪಕ್, ಬಿಜೆಪಿ ಮುಖಂಡ ಪುನೀತ್ ಬನ್ನಹಳ್ಳಿ ಭಾಗವಹಿಸಲಿದ್ದಾರೆಂದರು.

## ಜಿಲ್ಲೆಗೆ ಘೋಷಣೆಯಾಗಲಿವೆಯೇ ಹೊಸ ಯೋಜನೆ | ವಿಮಾನ ನಿಲ್ದಾಣ-ಐಐಟಿ ಕನಸು

# ನಾಳೆಯ ಕೇಂದ್ರ ಬಜೆಟ್ ಮೇಲೆ ಹೆಚ್ಚಿದ ನಿರೀಕ್ಷೆ

• ಪ್ರಜೋದಯ ವರದಿ

**ಹಾಸನ:** ಪ್ರಸಕ್ತ ಸಾಲಿನ ಕೇಂದ್ರ ಬಜೆಟ್ ಫೆ.1ರ ಭಾನುವಾರ ಮಂಡನೆಯಾಗಲಿದ್ದು, ಜಿಲ್ಲೆಗೆ ಮಹತ್ವದ ಯೋಜನೆಗಳು ಘೋಷಣೆಯಾಗುವ ನಿರೀಕ್ಷೆ ಗರಿಗೆದರಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇದೇ ಮೊದಲ ಬಾರಿಗೆ ಭಾನುವಾರ ಆಯವ್ಯಯ ಮಂಡಿಸಲು ಸಜ್ಜಾಗಿದ್ದಾರೆ. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದು, ಬಿಜೆಪಿ-ಜೆಡಿಎಸ್ ಮೈತ್ರಿ ಹಿನ್ನಲೆಯಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಪ್ರಾಧಾನ್ಯತೆ ಸಿಗುವ ವಿಶ್ವಾಸ ಜನರಲ್ಲಿ ಮನೆ ಮಾಡಿದೆ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ರಾಜ್ಯ ಹಾಗು ಜಿಲ್ಲೆಯ ಅಭಿವೃದ್ಧಿ ಕುರಿತಾಗಿ ಸುದೀರ್ಘ ಚರ್ಚೆ ನಡೆಸಿದ್ದಾರೆ. ಜೊತೆಗೆ ಕಳೆದ ಒಂದೂವರೆ ವರ್ಷದಿಂದ ಸಂಸದ ಶ್ರೇಯಸ್ ಪಟೇಲ್ ಅವರು ಹಲವು ಬಾರಿ ದೆಹಲಿ ಪ್ರವಾಸ ಕೈಗೊಂಡು ಜಿಲ್ಲೆಯ ಅಭಿವೃದ್ಧಿಗೆ ಒತ್ತು ನೀಡುವಂತೆ ಮನವಿ ಸಲ್ಲಿ



ಸುತ್ತಲೇ ಇದ್ದಾರೆ. ಸ್ಥಳೀಯ ಸಂಸ್ಥೆ, ಗ್ರಾಮ ಪಂಚಾಯಿತಿ ಚುನಾವಣೆ ದೃಷ್ಟಿ ಯಿಂದಲೂ ಬಿಜೆಪಿಗೆ ಬಜೆಟ್ ಮಹತ್ವದ್ದಾಗಿದೆ. ಕೇಂದ್ರ ಸಂಪುಟದಲ್ಲಿ ಹಾಸನದವರೇ ಆಗಿರುವ ಹೆಚ್.ಡಿ. ಕುಮಾರಸ್ವಾಮಿ ಇರು ವುದರಿಂದ ಕೈಗಾರಿಕೆಗಳ ಸ್ಥಾಪನೆ, ವಿಮಾನ ನಿಲ್ದಾಣಕ್ಕೆ ವೇಗ ಹಾಗು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ಘೋಷಣೆಯಾಗುವ ನಿರೀಕ್ಷೆ ಗರಿಗೆದರಿದೆ.

**ಐಐಟಿ ಘೋಷಣೆಯಾಗುವ ನಿರೀಕ್ಷೆ**

ಜಿಲ್ಲೆಯ ಜನರು ಬಹುದಿನಗಳ ಬೇಡಿಕೆಯಾಗಿರುವ ಐಐಟಿ ಘೋಷಣೆಯಾಗುವ ಸಾಧ್ಯತೆ ಹೆಚ್ಚಿದೆ. ನಗರದಲ್ಲಿ ಐಐಟಿ ಪ್ರಾರಂಭಿಸಲು ಕೇಂದ್ರ ಸರ್ಕಾರಕ್ಕೆ ಹಲವು ಪ್ರಸ್ತಾವನೆ ಸಲ್ಲಿಸಲಾಗಿದೆ. ಐಐಟಿ ಸ್ಥಾಪನೆ ಸಂಬಂಧ 2013ರಲ್ಲೇ ಕೇಂದ್ರ ಸರ್ಕಾರ ವಿಶೇಷ ಅಧ್ಯಯನ ತಂಡವನ್ನು ಜಿಲ್ಲೆಗೆ ಕಳುಹಿಸಿತ್ತು. ಕಾಮಗಾರಿಗಾಗಿ ಕೈಗಾರಿಕಾ ಪ್ರದೇಶದಲ್ಲಿ 1057 ಎಕರೆ ಜಮೀನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಆದರೆ, ಪ್ರತಿ ಬಜೆಟ್ ನಲ್ಲಿ ಈ ಕುರಿತು ನಿರಾಶೆ ಮುಂದುವರಿದಿದೆ. ಜ.24ರಂದು ಹಾಸನದಲ್ಲಿ ನಡೆದ ಜೆಡಿಎಸ್ ಜನತಾ ಸಮಾವೇಶದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಪ್ರಧಾನಿ ಮೋದಿ ಅವರಿಂದಲೇ ಐಐಟಿಗೆ ಚಾಲನೆ ಕೊಡಿಸುವುದಾಗಿ ಹೇಳಿದ್ದು, ಆಶಾವಾದ ಹೆಚ್ಚಿದೆ.

**ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಬೇಕು**

ಅರಸೀಕೆರೆ-ಚನ್ನರಾಯಪಟ್ಟಣ-ಕೆ.ಆರ್. ಪೇಟೆ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಪ್ರಸ್ತಾವನೆ ಸಲ್ಲಿಸುತ್ತಲೇ ಇದ್ದಾರೆ. ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವುದು. ಬಿಳಿಕೆರೆ-ಬೇಲೂರು ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ 950 ಕೋ.ರೂ. ವೆಚ್ಚದ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಅನುಮೋದನೆಗೆ ಕಾಯುತ್ತಿದೆ.

**ಕಾಡಾನೆ ಸಮಸ್ಯೆಗೆ ಸಿಗಲಿ ಪರಿಹಾರ**

ಜಿಲ್ಲೆಯ ಮಲೆನಾಡು ಭಾಗದಲ್ಲಿ ಕಾಡಾನೆ-ಮಾನವ ಸಂಘರ್ಷ ಮಿತಿ ಮೀರಿದ್ದು, ಸಮಸ್ಯೆಗೆ ಶಾಶ್ವತ ಪರಿಹಾರದ ಅವಶ್ಯವಿದೆ. ಬೇಲೂರು, ಸಕಲೇಶಪುರ ತಾಲ್ಲೂಕಿನಲ್ಲಿ 80ಕ್ಕೂ ಹೆಚ್ಚು ಕಾಡಾನೆಗಳಿವೆ. ಕಾಫಿ ತೋಟಗಳನ್ನೇ ಆವಾಸ ಸ್ಥಾನವಾಗಿಸಿಕೊಂಡಿರುವ ಆನೆಗಳು ಮನುಷ್ಯ ಜೀವದೊಂದಿಗೆ ಚೆಲ್ಲಾಟವಾಡುತ್ತಿವೆ. ಕಾಡಾನೆಗಳನ್ನು ಶಾಶ್ವತವಾಗಿ ಸ್ಥಳಾಂತರಿಸುವ ಅಥವಾ ಆನೆ ಧಾಮ ನಿರ್ಮಿಸುವ ಅವಶ್ಯಕತೆ ಕುರಿತು ಆಗ್ರಹ ಕೇಳುತ್ತಲೇ ಇದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ನಿರೀಕ್ಷಿತ ಅನುದಾನ ಘೋಷಿಸಬೇಕಿದೆ. ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದಲೂ ಈ ಬಜೆಟ್ ಮಹತ್ವ ಪಡೆದುಕೊಂಡಿದೆ. ವಿಶ್ವ ವಿಖ್ಯಾತ ಬೇಲೂರು, ಹಳೇಬೀಡು, ಶ್ರವಣಬೆಳಗೊಳ ಸೇರಿ ಜಿಲ್ಲೆಯ ಪ್ರವಾಸಿ ತಾಣಗಳ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಅನುದಾನ ಸಿಗುವ ನಿರೀಕ್ಷೆ ಇದೆ.

> **ಸಂಸತ್ ಅಧಿವೇಶನ ಹಾಗು ನೇರವಾಗಿ ಕೇಂದ್ರ ಸಚಿವರನ್ನು ಅನೇಕ ಬಾರಿ ಭೇಟಿ ಮಾಡಿ ಜಿಲ್ಲೆಯ ಅಭಿವೃದ್ಧಿಗೆ ಸಹಕರಿಸುವಂತೆ ಮನವಿ ಮಾಡಿದ್ದೇನೆ. ಮುಖ್ಯವಾಗಿ ಕಾಡಾನೆ ಸಮಸ್ಯೆ ಹಾಗು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಸ್ಪಂದನೆ ಸಿಗುವ ವಿಶ್ವಾಸವಿದೆ.**
> **-ಶ್ರೇಯಸ್ ಪಟೇಲ್, ಸಂಸದ**

**ಉದ್ಯೋಗಾವಕಾಶದ ಭರವಸೆ**

ಕೇಂದ್ರ ಬೃಹತ್ ಕೈಗಾರಿಕಾ ಸಚಿವರಾಗಿ ಹೆಚ್.ಡಿ.ಕುಮಾರಸ್ವಾಮಿ ಕಾರ್ಯ ನಿರ್ವಹಿಸುತ್ತಿದ್ದು, ಜಿಲ್ಲೆಯಲ್ಲೇ ಹೊಸ ಕೈಗಾರಿಕೆಗಳು ಸ್ಥಾಪನೆಯಾಗಿ ನಿರುದ್ಯೋಗಿ ಯುವಕ-ಯುವತಿಯರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗುವ ಯೋಜನೆಗಳು ಬಜೆಟ್‌ನಲ್ಲಿ ಘೋಷಣೆಯಾಗುವ ನಿರೀಕ್ಷೆ ಇದೆ. ಒಟ್ಟಾರೆ, ಕೇಂದ್ರದ ಈ ಬಜೆಟ್ ಜಿಲ್ಲೆಯ ಅಭಿವೃದ್ಧಿಗೆ ದಿಕ್ಸೂಚಿಯಾಗಲಿದೆ ಎಂಬ ನಿರೀಕ್ಷೆ ಮೂಡಿದೆ.

## ಬಂಟಿಂಗ್ಸ್ ಬ್ಯಾನರ್, ಫ್ಲೆಕ್ಸ್ ಅಳವಡಿಕೆ ನಿಷೇಧ

• ಪ್ರಜೋದಯ ವರದಿ


**ಸಕಲೇಶಪುರ :** ಪಟ್ಟಣ ವ್ಯಾಪ್ತಿ ಯ ಸಾರ್ವಜನಿಕ ಸ್ಥಳಗಳಲ್ಲಿ ಅನುಮತಿ ಇಲ್ಲದೆ ಫ್ಲೆಕ್ಸ್, ಬಂಟಿಂಗ್ಸ್ ಬ್ಯಾನರ್, ಹಾಕುವುದನ್ನು ನಿಷೇಧಿಸಲಾಗಿದೆ.

ಪಟ್ಟಣದ ಯಾವುದೇ ಸರ್ಕಾರಿ ಕಛೇರಿಗಳ ಮುಂಭಾಗ ಬ್ಯಾನರ್, ಫ್ಲೆಕ್ಸ್‌ಗಳನ್ನು ಅನುಮತಿ ಇಲ್ಲದೆ ಹಾಕಿದರೆ ಕ್ರಮ ತೆಗೆದು ಕೊಳ್ಳಲಾಗುವುದು.

ಬ್ಯಾನರ್ ಅಳವಡಿಕೆ ವೇಳೆ ಅಹಿತಕರ ಘಟನೆಗಳು ನಡೆದಲ್ಲಿ ಆಯೋಜಕರ ವಿರುದ್ಧ ಕರ್ನಾಟಕ ಸಾರ್ವಜನಿಕ ಸ್ಥಳಗಳ ವಿರೂಪ ತಡೆ ಕಾಯ್ದೆ-1981 ರಡಿ ಕಾನೂನಿನ ರೀತ್ಯಾ ಕ್ರಮವನ್ನು ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ 08173-244042, 7019059739, 9632415398 ಗೆ ಸಂಪರ್ಕಿಸುವಂತೆ ಎಂದು ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ.

CMYK CMYK CMYK CMYK

# ಮಕ್ಕಳು ದಿನಪತ್ರಿಕೆ ಓದುವುದನ್ನು ರೂಢಿಸಿಕೊಳ್ಳುವುದು ಹೇಗೆ..?



ವರ್ತಮಾನ ಉತ್ತರ ಪ್ರದೇಶ ಸರಕಾರವು ಶಾಲೆಗಳಲ್ಲಿ ಪ್ರತಿನಿತ್ಯ ವಿದ್ಯಾರ್ಥಿಗಳು ದಿನಪತ್ರಿಕೆಯನ್ನು ಓದುವುದನ್ನು ಇತ್ತೀಚೆಗೆ ಕಡ್ಡಾಯಗೊಳಿಸಿದೆ. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಉತ್ತರ ಪ್ರದೇಶ ಸರಕಾರದ ಈ ನಡೆ ಸ್ವಾಗತಾರ್ಹವಾದುದು. ಹಿಂದುಳಿದ ರಾಜ್ಯಗಳಲ್ಲಿ ಉತ್ತರ ಪ್ರದೇಶವೂ ಒಂದಾಗಿದ್ದು, ವಿದ್ಯಾರ್ಥಿಗಳು ದಿನಪತ್ರಿಕೆ ಓದುವುದನ್ನು ಶಾಲೆಗಳಲ್ಲಿ ಕಡ್ಡಾಯಗೊಳಿಸಿರುವುದು ಶೈಕ್ಷಣಿಕವಾಗಿ ಅನುಕೂಲಗಳು ಆಗಬಹುದು.

ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನೆ ಸಮಯದಲ್ಲಿ ಕೆಲವೊಂದು ಶಾಲೆಗಳಲ್ಲಿ ದಿನಪತ್ರಿಕೆಗಳನ್ನು ಸಾರ್ವಜನಿಕವಾಗಿ ಓದುವ ಪರಿಪಾಠವಿದೆ. ತೀರಾ ಚಿಕ್ಕಮಕ್ಕಳನ್ನು ಹೊರತುಪಡಿಸಿ ಕನಿಷ್ಠ ಐದನೇ ತರಗತಿ ಮೇಲ್ಪಟ್ಟ ಮಕ್ಕಳು ದಿನಪತ್ರಿಕೆಯನ್ನು ಓದುವುದು, ವಾಚನ ಮಾಡುವುದನ್ನು ಕೇಳಿಸಿ ಕೊಂಡರೆ, ಓದುವ ಕಡೆ ಕುತೂಹಲ ಹೆಚ್ಚಾಗಬಹುದು.

ದಿನಪತ್ರಿಕೆಗಳನ್ನು ವಾಚನ ಮಾಡುವುದನ್ನು ಕೇಳಿಸಿಕೊಳ್ಳುವ ಮಕ್ಕಳಲ್ಲಿ ಬೇರೆಯವರು ಏನಾದರೂ ಹೇಳುವಾಗ ಅದನ್ನು ಕೇಳಿಸಿಕೊಳ್ಳುವ ತಾಳ್ಮೆ ಬರುತ್ತದೆ. ಇದರಿಂದ ಮಕ್ಕಳಿಗೆ ವಿಷಯದ ಗ್ರಹಿಕೆ ಉತ್ತಮಗೊಂಡು ಅದರಿಂದ ಉಪಯೋಗವಾಗುತ್ತದೆ.

ಮಕ್ಕಳು ದಿನಪತ್ರಿಕೆಗಳನ್ನು ಓದುವುದರಿಂದ ತಮ್ಮ ಸುತ್ತಮುತ್ತ ಏನೆ ಬೆಳವಣಿಗೆಗಳಾಗುತ್ತಿವೆ ಎಂಬ ಅರಿವು ಉಂಟಾಗುತ್ತದೆ. ಸ್ಥಳೀಯ, ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೈವಿಧ್ಯಮಯ ವಿಚಾರಗಳು ಮಕ್ಕಳಿಗೆ ತಿಳಿಯುತ್ತದೆ. ಉದಾ: ಮಕ್ಕಳು ದಿನಪತ್ರಿಕೆಯನ್ನು ಓದುತ್ತಿದ್ದಾರೆ ಎಂದು ಭಾವಿಸೋಣ, ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವಾಯು ಗುಣಮಟ್ಟ ಕುಸಿತ ಎಂಬ ಸುದ್ದಿಯನ್ನು ಓದುತ್ತಾರೆ, ಆ ಸಂದರ್ಭದಲ್ಲಿ ಅವರ ತಲೆಯಲ್ಲಿ ಎರಡು ವಿಚಾರಗಳು ಬರುತ್ತವೆ.

ಒಂದು, ನಮ್ಮ ದೇಶದ ರಾಜಧಾನಿ ದೆಹಲಿ ಅಂತ, ಇನ್ನೊಂದು ಅಲ್ಲಿನ ವಾಯುಗುಣಮಟ್ಟದ ಬಗ್ಗೆ ಗೊತ್ತಾಗುತ್ತದೆ. ಈ ರೀತಿ ಮಕ್ಕಳು ದಿನಪತ್ರಿಕೆಗಳನ್ನು ಓದುವುದರಿಂದ ಸಾಮಾನ್ಯ ಜ್ಞಾನವು ಅವರಿಗೆ ಅರಿವಿಲ್ಲದಂತೆ ಹೆಚ್ಚುತ್ತದೆ. ಇದು ಶಾಲೆಯಲ್ಲಿ ನಡೆಯುವ ರಸಪ್ರಶ್ನೆ, ಪ್ರಬಂಧ ಸ್ಪರ್ಧೆ, ಪರೀಕ್ಷೆಗಳು ಮುಂತಾದ ಕಡೆಗಳಲ್ಲಿ ಸಹಾಯಕ್ಕೆ ಬರುತ್ತವೆ.

ಮಕ್ಕಳು ದಿನಪತ್ರಿಕೆಗಳನ್ನು ಓದುವುದರಿಂದ ಅವರ ಭಾಷಾ ಕೌಶಲ್ಯ, ಪದಸಂಪತ್ತು ವೃದ್ಧಿಸುತ್ತದೆ. ಸಾಮಾನ್ಯವಾಗಿ ಮಕ್ಕಳು ಪ್ರತಿದಿನ ಸಾಮಾನ್ಯವಾಗಿ ಪಠ್ಯಪುಸ್ತಕಗಳನ್ನು ಮಾತ್ರ ಓದುತ್ತಿರುತ್ತಾರೆ. ಹಿಂದೆ ಚಿಕ್ಕಮಕ್ಕಳಿಗೆ ಬಾಲಮಂಗಳ, ಚಂದಮಾಮ ಮುಂತಾದ ಪುಸ್ತಕಗಳನ್ನು ಪೋಷಕರು ಕೊಡಿಸುತ್ತಿದ್ದರು, ಇವುಗಳನ್ನು ಓದುತ್ತಿದ್ದ ಮಕ್ಕಳಿಗೆ ಅದರಿಂದ ಪ್ರಯೋಜನಗಳು ಆಗುತ್ತಿದ್ದವು.

ಪ್ರಸ್ತುತ ಮಕ್ಕಳು ಪಠ್ಯಪುಸ್ತಕಗಳನ್ನು ಬಿಟ್ಟು ಬೇರೆನನ್ನೂ ಓದುತ್ತಿಲ್ಲ. ಒಮ್ಮೆ ಅವರು ದಿನಪತ್ರಿಕೆಗಳನ್ನು ಓದಲು ಶುರು ಮಾಡಿದರೆ ಅವರಿಗೆ ಹೊಸದೊಂದು ಜ್ಞಾನ ಪ್ರಪಂಚ ತೆರೆದುಕೊಳ್ಳುತ್ತದೆ. ಪ್ರತಿದಿನ ಬರೀ ಪಠ್ಯಪುಸ್ತಕಗಳು ಮತ್ತು ಇತರ ವಿಚಾರಗಳನ್ನು ತಿಳಿದುಕೊಳ್ಳುವ ಮಕ್ಕಳು ಹೊಸ ವಿಷಯ, ವಿಚಾರಗಳನ್ನು ತಿಳಿದುಕೊಳ್ಳಲು ಆರಂಭಿಸುತ್ತಾರೆ.


ಕನ್ನಡ, ಇಂಗ್ಲಿಷ್ ಮತ್ತು ಇತರ ಯಾವುದೇ ಭಾಷೆಗಳ ದಿನಪತ್ರಿಕೆಗಳನ್ನು ಓದುತ್ತಾ, ಓದುತ್ತಾ ಹೋದಂತೆ ಇದುವರೆಗೂ ಓದಿರದ ಎಷ್ಟೋ ಪದಗಳು ಗೊತ್ತಾಗುತ್ತವೆ. ಒಂದು ಭಾಷೆಯ ಉಳಿವಿಗೆ ಇದೂ ಕೂಡ ಕೊಡುಗೆ ನೀಡುತ್ತದೆ. ವಿದ್ಯಾರ್ಥಿಯು ಆರನೇ ತರಗತಿಯಿಂದ ತಾನು ಪದವಿ ವ್ಯಾಸಂಗ ಮುಗಿಸುವ ಹಂತಕ್ಕೆ ಬರುವವರೆಗೆ ಪ್ರತಿದಿನವೂ ಒಂದೊಂದು ಪದವನ್ನು ತಿಳಿದುಕೊಂಡರೂ ಆ ವಿದ್ಯಾರ್ಥಿಯ ಪದಸಂಪತ್ತು ಒಂದು ನಿಘಂಟಿಗೆ ಸಮವಾಗುತ್ತದೆ.

ಎಲ್ಲಾ ವಿದ್ಯಾರ್ಥಿಗಳಿಂದ ಇದು ಸಾಧ್ಯವೇ ಎಂಬ ಪ್ರಶ್ನೆ ಮೂಡಬಹುದು. ಅದಕ್ಕೆ ಪರಿಹಾರ - ವಿದ್ಯಾರ್ಥಿಗಳು ದಿನಪತ್ರಿಕೆಯನ್ನು ಓದುವಂತೆ ಉತ್ತೇಜನ ನೀಡಬೇಕು, ಓದುವ ಪರಿಸರ ಸೃಷ್ಟಿಸ ಬೇಕು. ಮಕ್ಕಳು ಚಿಕ್ಕವಯಸ್ಸಿನ ದಿನಪತ್ರಿಕೆಗಳನ್ನು ಓದುವುದನ್ನು ರೂಢಿಸಿಕೊಂಡರೆ ಅದರಿಂದ ಆಗುವ ಲಾಭಗಳು ಸಾಕಷ್ಟು.

**ದಿನಪತ್ರಿಕೆಗಳ ಓದು ಉತ್ತೇಜಿಸುವುದು ಹೇಗೆ..?**


ಸರಕಾರಗಳೇನೋ ಶಾಲೆಗಳಲ್ಲಿ ಪ್ರತಿನಿತ್ಯ ದಿನಪತ್ರಿಕೆಗಳನ್ನು ಓದುವುದನ್ನು ಕಡ್ಡಾಯಗೊಳಿಸಿದೆ. ಆದರೆ, ಅದನ್ನು ಹೊರತುಪಡಿಸಿ ಬೇರೆ ಮಾರ್ಗಗಳ ಬಗ್ಗೆ ಚಿಂತಿಸುವ ಅಗತ್ಯವಿದೆ. ಮನೆಯೇ ಮೊದಲ ಪಾಠಶಾಲೆ ಎಂಬ ನಾಣ್ಣುಡಿಯ ಹಾಗೆ ಯಾವುದೇ ಮಗು ಶಾಲೆಗೆ ಸೇರುವ ಮೊದಲು ಆ ಮಗುವಿಗೆ ತನ್ನ ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು.

**» ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನೆ ಸಮಯದಲ್ಲಿ ಕೆಲವೊಂದು ಶಾಲೆಗಳಲ್ಲಿ ದಿನಪತ್ರಿಕೆಗಳನ್ನು ಸಾರ್ವಜನಿಕವಾಗಿ ಓದುವ ಪರಿಪಾಠವಿದೆ. ತೀರಾ ಚಿಕ್ಕಮಕ್ಕಳನ್ನು ಹೊರತುಪಡಿಸಿ ಕನಿಷ್ಠ ಐದನೇ ತರಗತಿ ಮೇಲ್ಪಟ್ಟ ಮಕ್ಕಳು ದಿನಪತ್ರಿಕೆಯನ್ನು ಓದುವುದು, ವಾಚನ ಮಾಡುವುದನ್ನು ಕೇಳಿಸಿ ಕೊಂಡರೆ, ಓದುವ ಕಡೆ ಕುತೂಹಲ ಹೆಚ್ಚಾಗಬಹುದು.**




ಈ ನಿಟ್ಟಿನಲ್ಲಿ ಮೊದಲು ಪೋಷಕರಾದವರು ಮನೆಯಲ್ಲಿ ದಿನಪತ್ರಿಕೆಗಳನ್ನು ಓದಲು ಅಭ್ಯಾಸ ಮಾಡಿಕೊಂಡರೆ ಚಿಕ್ಕಮಕ್ಕಳು ಅದನ್ನು ನೋಡಿ ಮುಂದೆ ಬೆಳೆಯುತ್ತಾ ಹೋದಂತೆ ದಿನಪತ್ರಿಕೆಗಳನ್ನು ಓದುವ ಪ್ರಯತ್ನ ಮಾಡಬಹುದು. ಇದು ಎಲ್ಲಾ ಪೋಷಕರಿಗೂ ಸಾಧ್ಯವೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ.

ಆದರೆ ಅಕ್ಷರಸ್ಥ ಪೋಷಕರಲ್ಲಿ ಕೆಲವರಾದರೂ ಈ ಕೆಲಸವನ್ನು ಮಾಡಬಹುದು, ಅದು ಸಾಧ್ಯವಿದೆ, ಮಾಡುವ ಇಚ್ಛಾಶಕ್ತಿ, ಮಾಡುವ ಸಂಕಲ್ಪ ಇರಬೇಕಷ್ಟೆ. ಮಾಹಿತಿ ತಂತ್ರಜ್ಞಾನದ ಆಗಮನದಿಂದ ಮನುಷ್ಯನ ಜೀವನ ಸಾಕಷ್ಟು ಬದಲಾವಣೆಯನ್ನು ಕಂಡಿದೆ. ಕೊರೊನಾ ನಂತರವಂತೂ ವಿದ್ಯಾರ್ಥಿಗಳು, ಮಕ್ಕಳು ಶೈಕ್ಷಣಿಕ ಕಾರಣಗಳ ಹೊರತಾಗಿ ಮೊಬೈಲ್ ಬಳಸುವುದನ್ನು ಹೆಚ್ಚೆಚ್ಚು ರೂಢಿ ಮಾಡಿಕೊಂಡಿದ್ದಾರೆ.



ಇದರಿಂದ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಸಾಕಷ್ಟು ದುಷ್ಪರಿಣಾಮ ಬೀರುತ್ತಿದೆ. ಇದರಿಂದ ಹೊರಬರಲು ದಿನಪತ್ರಿಕೆಗಳನ್ನು ಓದುವ ಅಭ್ಯಾಸವನ್ನು ರೂಢಿಸಿಕೊಳ್ಳಬಹುದು.

ಗ್ರಂಥಾಲಯಕ್ಕೆ ಹೋಗುವುದು ಮಕ್ಕಳು ತಮಗೆ ಹತ್ತಿರವಿರುವ ಯಾವುದಾದರೂ ಗ್ರಂಥಾಲಯಕ್ಕೆ ಹೋದರೆ ಅಲ್ಲಿ ಸಿಗುವುದು ಗಾಢ ಮೌನ, ತೆರೆಯದೇ ಇರುವ ದಿನಪತ್ರಿಕೆಗಳು, ನಿಯತಕಾಲಿಕೆಗಳು ಹಾಗೂ ಪುಸ್ತಕಗಳು. ಇದರಿಂದಾಗುತ್ತಿರುವ ನಷ್ಟಕ್ಕೆ ಬೆಲೆಕಟ್ಟಲು ಆಗುವುದಿಲ್ಲ. ಈ ನಿಟ್ಟಿನಲ್ಲಿ ಪೋಷಕರು ಅಥವಾ ಶಿಕ್ಷಕರು ಮಕ್ಕಳು ಗ್ರಂಥಾಲಯಕ್ಕೆ ಹೋಗುವುದನ್ನು ಉತ್ತೇಜಿಸಬೇಕು.

ಗ್ರಂಥಾಲಯದಲ್ಲಿ ವಿವಿಧ ಭಾಷೆಗಳ ಸಾಕಷ್ಟು ಪುಸ್ತಕಗಳು, ದಿನಪತ್ರಿಕೆಗಳು ಹಾಗೂ ನಿಯತಕಾಲಿಕೆಗಳು ಸಿಗುತ್ತವೆ. ಮಕ್ಕಳು ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಇಂದು ಹದಿಹರೆಯದವರು ಕೂಡ ಸಾಮಾಜಿಕ ಜಾಲತಾಣಗಳ ದಾಸರಾಗಿರುವುದು ಆತಂಕದ ಸಂಗತಿ.

ನಿತ್ಯಜೀವನಕ್ಕೆ ಬೇಡದ ಅನವಶ್ಯಕವಾದುದನ್ನು ಇಂದಿನ ಯುವ ಪೀಳಿಗೆ ನೋಡುತ್ತಿದೆ. ಇದರಿಂದ ಹೊರಬರಲು ದಿನಪತ್ರಿಕೆ, ಪುಸ್ತಕಗಳ ಓದು ಪರಿಹಾರವಾಗಬಲ್ಲದು. ಈ ಎಲ್ಲಾ ಬೆಳವಣಿಗೆಗಳು ಒಂದೇ ದಿನಕ್ಕೆ ಆಗದಿರಬಹುದು, ಆದರೆ ಎಲ್ಲರೂ ಪ್ರಯತ್ನಿಸಿದರೆ ಹೊಸ ವ್ಯವಸ್ಥೆಯನ್ನು ಕಟ್ಟಲು ಸಾಧ್ಯ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ಸಾಕಷ್ಟು ವರ್ಷಗಳ ಹೋರಾಟ, ಪ್ರಯತ್ನದ ಫಲವಾಗಿ. ಆದ್ದರಿಂದ ಮಕ್ಕಳು/ ವಿದ್ಯಾರ್ಥಿಗಳು ದಿನಪತ್ರಿಕೆ, ಪುಸ್ತಕ, ನಿಯತಕಾಲಿಕೆಗಳನ್ನು ಓದುವುದನ್ನು ಸ್ವಲ್ಪವಾದರೂ ರೂಢಿಸಿಕೊಳ್ಳಬೇಕು. ಒಂದು ಬದಲಾವಣೆ ಒಂದೆರಡು ದಿನಕ್ಕೆ ಆಗದಿರಬಹುದು. ಆದರೆ ಪ್ರಯತ್ನವನ್ನು ನಿಲ್ಲಿಸಬಾರದು. ಒಳ್ಳೆಯ ಕಾರಣಕ್ಕೆ ಆಗುವ ಬದಲಾವಣೆ ಕಾಲ ಹಿಡಿಯುತ್ತದೆ. ಆದರೆ ವಿದ್ಯಾರ್ಥಿಗಳು ಕೈಚೆಲ್ಲಬಾರದು.

ಸ್ವಾಮಿ ವಿವೇಕಾನಂದರು ಮರಳಿ ಯತ್ನವ ಮಾಡು ಗೆಲುವು ನಿನ್ನದೇ ಎಂದು ಹೇಳಿದ ಹಾಗೆ ವಿದ್ಯಾರ್ಥಿಗಳು ಒಳ್ಳೆಯ ಬದಲಾವಣೆಗೆ ನಿರಂತರ ಪ್ರಯತ್ನ ಮಾಡಬೇಕು. ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಸಾಮಾಜಿಕ ಉನ್ನತಿ ಹಾಗೂ ಅಂತಿಮವಾಗಿ ದೇಶಕ್ಕೆ ಒಳ್ಳೆಯದಾಗುತ್ತದೆ.

ಮಕ್ಕಳಲ್ಲಿ ದಿನಪತ್ರಿಕೆ ಓದುವುದನ್ನು ಉತ್ತೇಜನ ನೀಡುವುದರ ಜೊತೆಗೆ ನಿಯಮಿತವಾಗಿ ಪುಸ್ತಕವನ್ನು ಓದುವಂತೆ ಉತ್ತೇಜಿಸಬೇಕು. ಇಂದು ನಮ್ಮ ಶಿಕ್ಷಣ ವ್ಯವಸ್ಥೆ ಕೇವಲ ಪಠ್ಯಕ್ರಮ ಆಧಾರಿತ, ಉತ್ತಮ ಅಂಕಗಳನ್ನು ಗಳಿಸುವುದರ ಮೇಲೆ ಕೇಂದ್ರೀಕೃತವಾಗಿದೆ.

ಇದರಿಂದ ದೀರ್ಘಕಾಲಕ್ಕೆ ವಿದ್ಯಾರ್ಥಿಗಳಿಗೆ ಅನುಕೂಲಗಳಿಲ್ಲ. ವಿದ್ಯಾರ್ಥಿಗಳಲ್ಲಿ ಸಚ್ಚಾರಿತ್ರ್ಯ ನಿರ್ಮಾಣ ಮಾಡುವ ನಿಟ್ಟಿನಲ್ಲಿ ದಿನಪತ್ರಿಕೆ, ನಿಯತಕಾಲಿಕೆ, ಪುಸ್ತಕಗಳ ಓದು ನೆರವಾಗುತ್ತದೆ. ಇದರ ಜೊತೆಗೆ ದಿನಪತ್ರಿಕೆಯನ್ನು ಓದುವ ಅಭ್ಯಾಸವನ್ನು ಚೆನ್ನಾಗಿ ರೂಢಿಸಿಕೊಂಡ ವಿದ್ಯಾರ್ಥಿಯನ್ನು ಪ್ರಶಂಸಿಸಬೇಕು.

ಇದರಿಂದ ಇತರ ವಿದ್ಯಾರ್ಥಿಗಳು ಪ್ರೇರೇಪಿತರಾಗಿ ತಾವು ಓದುವುದನ್ನು ರೂಢಿಸಿಕೊಳ್ಳುವ ಸಾಧ್ಯತೆ ಹೆಚ್ಚು. ಸರಕಾರ ಶಾಲೆಗಳಲ್ಲಿ ದಿನಪತ್ರಿಕೆಗಳನ್ನು ಓದುವಂತೆ ನಿಯಮವನ್ನು ರೂಪಿಸಿದರೂ, ಅಂತಿಮವಾಗಿ ಶಾಲೆಗಳಲ್ಲಿ ಶಿಕ್ಷಕರು, ಮನೆಯಲ್ಲಿ ಪೋಷಕರು ಪ್ರೋತ್ಸಾಹವನ್ನು ನೀಡಬೇಕು. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅಭ್ಯಾಸದ ರೀತಿಯ ಮೊದಮೊದಲು ಕಷ್ಟವಾಗಬಹುದು, ಮುಂದೆ ಎಲ್ಲವೂ ಸರಿಹೋಗುತ್ತದೆ.

ಲೇಖಕರು, ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟನ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

**- ಪ್ರಸಾದ್** ಜಿ.ಎಂ.

# ರಿಜೆಕ್ಟ್ ದಿ ರಿಜೆಕ್ಷನ್: ನಿರಾಕರಣೆಯನ್ನು ನಿರಾಕರಿಸಿ!

**■ ಫಲಿತಾಂಶ ಹೇಳಬೇಕಾಗಿಲ್ಲ ಎಂದುಕೊಳ್ಳುವೆ. ರಿಜೆಕ್ಷನ್ ಎನ್ನುವುದು ಈ ವೇಳೆಗೆ ಅಭ್ಯಾಸವಾಗಿ ಹೋಗಿ ಬಿಟ್ಟಿತ್ತು. ಪರವಾಗಿಲ್ಲ ಎನ್ನುವ ಎಲ್ಲಾ ಸಂಸ್ಥೆಗಳಲ್ಲೂ ನನ್ನನ್ನು ತಿರಸ್ಕರಿಸಿದ್ದರು. ಮಶ್ವರಂನಿಂದ ಯಶವಂತಪುರದ ಕಡೆಗೆ ನಡೆಯುತ್ತಾ ನನಗೆ ಗೊತ್ತಿಲ್ಲದೆ ಕಣ್ಣಲ್ಲಿ ನೀರು ಹರಿಯುತ್ತಿತ್ತು.**

ವಿಶ್ವರಂಗ ನಮ್ಮ ಎಲ್ಲಾ ರೀತಿಯ ಕೆಲಸಗಳ ಕಾರಣ ಮತ್ತು ಫಲಿತಾಂಶವೇ ನಾವು ಎನ್ನಬಹುದು. ಬಹಳ ಸರಳವಾಗಿ ಇದನ್ನು, ಬೇವಿನ ಬೀಜವನ್ನು ಬಿತ್ತಿ ಮಾವಿನ ಫಲ ನಿರೀಕ್ಷಿಸಿದರೆ ಹೇಗೆ ಅದು ಸಾಧ್ಯವಿರುವುದಿಲ್ಲವೋ, ಥೇಟ್ ಹಾಗೆ ನಮ್ಮ ಒಟ್ಟು ಕರ್ಮಫಲಗಳು ನಾವು ಎನ್ನಬಹುದು. ಇದೇನೂ ದೊಡ್ಡ ರಹಸ್ಯವಲ್ಲ.

ಬಹಳ ಹಿಂದಿನಿಂದ ನಮ್ಮ ಪೂರ್ವಜರು ಈ ಮಾತುಗಳನ್ನು ಹೇಳಿಕೊಂಡು ಬಂದಿದ್ದಾರೆ. ಆದರೆ ಈ ಗುಣವನ್ನು ಒಂದು ಕಿವಿಯಲ್ಲಿ ಕೇಳಿ ಇನ್ನೊಂದರಲ್ಲಿ ಬಿಡುವವರ ಸಂಖ್ಯೆ ಅಸಂಖ್ಯ. ಯಾರು ಈ ಗುಣವನ್ನು, ಲಕ್ಷಣವನ್ನು ತಮ್ಮದಾಗಿಸಿಕೊಂಡಿದ್ದಾರೋ ಅವರು ಬದುಕಿನಲ್ಲಿ ತಮಗೂ ಮತ್ತು ಇತರರಿಗೂ ಸೃಷ್ಟಿಸಿದ್ದಾರೆ.



ಆಶ್ಚರ್ಯ ಎನ್ನಿಸುತ್ತದೆ, ಆದರೆ ಒಂದು ಸತ್ಯವೇನು ಗೊತ್ತೇ? ಒಮ್ಮೆ ನಾವು ಇಂಥ ಒಂದು ಅಂಶವನ್ನು ಸೃಷ್ಟಿಸಿಬಿಟ್ಟರೆ ಸಾಕು ಅದು ಬಹುದೂರ ಸಾಗುತ್ತದೆ. ನಮ್ಮ ಅರಿವಿಗೂ, ಊಹೆಗೂ ನಿಲುಕದ ರೀತಿಯಲ್ಲಿ ಬೇರೆಯವರನ್ನು ತಲುಪುತ್ತದೆ. ಯೋಚಿಸಲಾಗದ ರೀತಿಯಲ್ಲಿ ಅದು ದುಪ್ಪಟ್ಟುಗೊಳ್ಳುತ್ತಾ ತನ್ನ ಫಲಿತಾಂಶವನ್ನು ನೀಡುತ್ತದೆ.

ಕೊನೆಯ ಫಲಿತಾಂಶ ಅಥವಾ ಎಂಡ್ ರಿಸಲ್ಟ್ ಎಂದು ನಾವು ಏನನ್ನು ಕರೆಯುತ್ತೇವೋ ಅದು ಆಕಸ್ಮಿಕವಾಗಿರಲು ಸಾಧ್ಯವಿಲ್ಲ. ಅದು ನಿಗದಿತ ಕೆಲಸವನ್ನು ಪದೇ ಪದೆ, ನಿಗದಿತ ಫಲಿತಾಂಶ ಸಿಗುವವರೆಗೆ ಬೇಸರವಿಲ್ಲದೆ ಮಾಡುವ ಕ್ರಿಯೆ. ಈ ಸಾಲುಗಳನ್ನು ಮನನ ಮಾಡಿಕೊಳ್ಳುವುದು ಉತ್ತಮ.

ಬೇಕಿದ್ದಲ್ಲಿ ಇದನ್ನು ಬರೆದು ಓದುವ ಕೋಣೆಯಲ್ಲಿ, ಕಂಪ್ಯೂಟರ್ ಮೇಲೆ, ಫ್ರಿಜ್ ಮೇಲೆ ಎದರೂ ಸರಿಯೇ ನಿತ್ಯವೂ ಕಣ್ಣಿಗೆ ಕಾಣಿಸುವಂತೆ ಅಂಟಿಸಿಕೊಳ್ಳುವುದು ಕೂಡ ಮಾಡ ಬಹುದು. ನಿತ್ಯವೂ ಹತ್ತಾರು ಬಾರಿ ಇದನ್ನು ಓದುವುದರಿಂದ ಅದು ಮನಸ್ಸಿಗೆ ಹೆಚ್ಚು ನಾಟುತ್ತದೆ. ಈಗ ನೀವೇ ಪ್ರಶ್ನಿಸಿಕೊಂಡು ನೋಡಿ, ಹಿಡಿದ ಕೆಲಸದಲ್ಲಿ ಬಯಸಿದ ಫಲಿತಾಂಶ ಸಿಗದೆ ಹೋದರೆ ನಾವು ನಿರಾಶರಾಗುತ್ತೇವೆ.

ಇದರ ಸಹವಾಸ ಸಾಕು ಎಂದು ಬೇರೊಂದು ಪ್ರಯತ್ನಕ್ಕೆ ಕೈಹಾಕುತ್ತೇವೆ ಅಲ್ಲವೇ? ಉತ್ತರದಲ್ಲಿ ಪ್ರಾಮಾಣಿಕತೆಯಿರಲಿ. ಇದರಲ್ಲಿ ನಾಚಿಕೆ ಪಟ್ಟುಕೊಳ್ಳುವಂಥದ್ದು ಏನಿಲ್ಲ. ಜಗತ್ತಿನ 99 ಪ್ರತಿಶತ ಜನ ಮಾಡುವುದು ಇದನ್ನೇ!

ನಾವು 99 ರಿಂದ 1 ಪ್ರತಿಶತ ಜನರಲ್ಲಿ ಒಬ್ಬರಾಗಬೇಕು ಎಂದರೆ ನಮ್ಮ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕು. ಸುಲಭವಾಗಿ ಎಲ್ಲವನ್ನೂ ಬಿಟ್ಟು ಮುಂದೆ ಹೋಗುವುದು ಉತ್ತಮ ಲಕ್ಷಣವಲ್ಲ. ಹಿಡಿದ ಕೆಲಸವು ಬಯಸಿದ ಫಲಿತಾಂಶವನ್ನು ಕೊಡುವವರೆಗೆ ದುಡಿಯಬೇಕು.

ದಣಿವಿನಲ್ಲೂ ದೃಢತೆ ಕಳೆದುಕೊಳ್ಳಬಾರದು. ನಾವು ಪ್ರತಿ ಕೆಲಸವನ್ನು ಶುರುಮಾಡಲು ಒಂದು ಕಾರಣವಿರುತ್ತದೆ. ಆ ಕಾರಣದ ಸಲುವಾಗಿ ನಾವು ಮಾಡುವ ಕೆಲಸವು ಫಲವನ್ನು ನೀಡುತ್ತದೆ. ಫಲಿತಾಂಶ ಯಾವಾಗಲೂ ನಾವು ಬಯಸಿದಂತೆಯೇ ಇರಬೇಕು ಎನ್ನುವಂತಿಲ್ಲ.

ನಾವು ಬಯಸಿದ ಫಲಿತಾಂಶ ಸಿಕ್ಕರೆ ನಮ್ಮ ಸಿದ್ಧತೆ ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ಪ್ರೋಸೆಸ್ ಸರಿಯಾಗಿದೆ ಎಂದರ್ಥ. ಅದಿಲ್ಲದೆ ವ್ಯತಿರಿಕ್ತ ಫಲಿತಾಂಶ ಬಂದಿದ್ದರೆ, ನಮ್ಮ ಕೆಲಸದಲ್ಲಿ, ನಮ್ಮ ಪ್ರೋಸೆಸ್‌ನಲ್ಲಿ ಏನೋ ಎಡವಟ್ಟಾಗಿದೆ ಎಂದರ್ಥ. ಹೀಗಾಗಿ ಫಲಿತಾಂಶ ಏನೇ ಇರಲಿ ಅದು ಆಕ್ಸಿಡೆಂಟ್ ಅಲ್ಲ.

ಅಚಾನಕ್ಕಾಗಿ ಏನೂ ಆಗುವುದಿಲ್ಲ. ಅದು ಒಂದಲ್ಲ ಹತ್ತಾರು ಸೂಚನೆಗಳನ್ನು ಕೊಟ್ಟಿರುತ್ತದೆ. ಆದರೆ ನಾವು ಅದನ್ನು ಅರಿತುಕೊಳ್ಳುವಲ್ಲಿ ಸೋತಿರುತ್ತೇವೆ. ಹಾಗೆ ನೋಡಲು ಹೋದರೆ ಆಕ್ಸಿಡೆಂಟ್ ಅಥವಾ ಅಪಘಾತ ಕೂಡ ನಿಜಾರ್ಥದಲ್ಲಿ ಅಪಘಾತವಲ್ಲ, ಅದು ಕೂಡ ಸೂಚನೆ ಕೊಟ್ಟಿರುತ್ತದೆ.

ನಿದ್ದೆ ಬರುತ್ತಿದ್ದರೂ ಡ್ರೈವ್ ಮಾಡುವುದು, ಮಿತಿ ಮೀರಿದ ವೇಗ, ಅಥವಾ ಮೆಕ್ಯಾನಿಕ್ ನಿಮ್ಮ ವಾಹನವು ದೂರ ಪ್ರಯಾಣಕ್ಕೆ ಯೋಗ್ಯವಲ್ಲ ಎಂದಿರುವುದು ಹೀಗೆ ಹಲವಾರು ಸೂಚನೆಗಳನ್ನು ನಿರ್ಲಕ್ಷಿಸಿ ವಾಹನ ಚಾಲನೆ ಮಾಡಿ ಅಪಘಾತಕ್ಕೆ ತುತ್ತಾದರೆ ಅದನ್ನು ಅಪಘಾತ ಎನ್ನುವುದು ಹೇಗೆ? ಗೊತ್ತಿಲ್ಲದೇ ಆಗುವುದು ಆಕ್ಸಿಡೆಂಟ್ ಎನ್ನಿಸುತ್ತದೆ.

ಮುಕ್ಕಾಲು ಪಾಲು ಫಲಿತಾಂಶಗಳು ಆಕ್ಸಿಡೆಂಟ್ ಆಗಿರುವುದಿಲ್ಲ. ಮನುಷ್ಯನ ಚಿಂತನೆಗಳಿಗೆ ಅಗಾಧ ಶಕ್ತಿಯಿದೆ. ಅದು ಬೇಕಾದ್ದನ್ನು ಸೃಷ್ಟಿಸುವ ಅಥವಾ ನಾಶ ಮಾಡುವ ಶಕ್ತಿಯನ್ನು ಖಂಡಿತ ಹೊಂದಿದೆ. ನಮಗೇನೂ ಬೇಡ ಎಂದು ಕುಳಿತುಕೊಳ್ಳುವ ಚಿಂತನೆ ಕೂಡ ಅದರದೇ ಆದ ಸನ್ನಿವೇಶವನ್ನು ಸೃಷ್ಟಿಸುತ್ತದೆ.

ಹೀಗಾಗಿ ನಾವು ಚಲನೆಯಲ್ಲಿರಲಿ ಅಥವಾ ಜಡತ್ವವನ್ನು ಒಪ್ಪಿಕೊಂಡಿರಲಿ ಎರಡೂ ಬೇರೆ ಬೇರೆ ರೀತಿಯ ಫಲಿತಾಂಶವನ್ನು ನೀಡುತ್ತವೆ. ನಮ್ಮ ಚಿಂತನೆಯು ನಮ್ಮನ್ನು ಸಮಾಜದಲ್ಲಿ ಉನ್ನತಿಯ ಕಡೆಗೂ, ಅವನತಿಯ ಕಡೆಗೂ ಕರೆದೊಯ್ಯುವ ಶಕ್ತಿಯನ್ನು ಹೊಂದಿವೆ. ಇಷ್ಟೆ ಹೇಳುವುದಕ್ಕೆ ಕಾರಣ ಕೆಳಗಿನ ಸಾಲುಗಳಲ್ಲಿವೆ.

ಕೆಲಸಕ್ಕಾಗಿ ಬೆಂಗಳೂರಿನ ಬೀದಿ ಬೀದಿಗಳನ್ನು ಅಲೆದಿದ್ದೇನೆ. ಕೆಲಸಕ್ಕೆ ಅರ್ಜಿ ಹಾಕಿದ ಕಡೆಯಿಂದ ಇಂಟರ್‌ವ್ಯೂಗೆ ಕರೆ ಬಂದರೆ ಖುಷಿಯಾಗುತ್ತಿತ್ತು. ಏಕೆಂದರೆ ಹತ್ತರಲ್ಲಿ ನಾಲ್ಕೈದು ಕಡೆಯಿಂದ ಮಾತ್ರ ಕರೆ ಬರುತ್ತಿತ್ತು. ಸಂದರ್ಶನದಲ್ಲಿ ನಪಾಸು ಆಗುವುದು ಕೂಡ ಸಾಮಾನ್ಯವಾಗಿತ್ತು. ಯಾರೂ ಕಾರಣ ಹೇಳುತ್ತಿರಲಿಲ್ಲ. ಆದರೆ ಕೆಲಸ ಮಾತ್ರ ಯಾರೂ ಕೊಡಲಿಲ್ಲ.


ಅದೊಂದು ದಿನ ಟೊಯೋಟಾ ಕಿರ್ಲೋಸ್ಕರ್ ಸಂಸ್ಥೆಯಿಂದ ಸಂದರ್ಶನಕ್ಕೆ ಕರೆ ಬಂದಿತ್ತು. ಬಹಳ ಖುಷಿಯಿಂದ, ಶ್ರದ್ಧೆಯಿಂದ, ಸಂದರ್ಶನದಲ್ಲಿ ಏನೆ ಕೇಳಬಹುದು ಎನ್ನುವುದನ್ನು ಊಹಿಸಿಕೊಂಡು ಅದಕ್ಕೆ ತಯಾರಿ ಮಾಡಿಕೊಂಡು ಹೋಗಿದ್ದೆ.

ಜಪಾನಿಯರ ಬಗ್ಗೆ ಕೂಡ ಒಂದಷ್ಟು ತಿಳಿದು ಕೊಂಡು ಹೋಗಿದ್ದೆ. ಸಂದರ್ಶಕರು ಜಪಾನಿಯರು ಆಗಿರಬಹುದು ಎನ್ನುವ ಊಹೆ ಕೂಡ ಮಾಡಿಕೊಂಡಿದ್ದೆ. ನನ್ನ ಊಹೆ ನಿಜವಾಗಿತ್ತು. ಜಪಾನಿಯರು ಸಂದರ್ಶನಕ್ಕೆ ಕುಳಿತ್ತಿದ್ದರು. ಜಗತ್ತಿನ ಅರಿವಿಲ್ಲದ ವಯಸ್ಸದು. ಮೆಜೆಸ್ಟಿಕ್, ಎಂಜಿ ರಸ್ತೆ ನೋಡಿರದ ಬದುಕು. ಅವರು ಕೇಳಿದಕ್ಕೆ ಸರಿಯಾಗಿ ಉತ್ತರಿಸುವುದು ದೂರದ ಮಾತು, ಏನು ಕೇಳುತ್ತಿದ್ದಾರೆ ಎನ್ನುವುದೇ ಅರ್ಥವಾಗಲಿಲ್ಲ.

ಫಲಿತಾಂಶ ಹೇಳಬೇಕಾಗಿಲ್ಲ ಎಂದುಕೊಳ್ಳುವೆ. ರಿಜೆಕ್ಷನ್ ಎನ್ನುವುದು ಈ ವೇಳೆಗೆ ಅಭ್ಯಾಸವಾಗಿ ಹೋಗಿ ಬಿಟ್ಟಿತ್ತು. ಪರವಾಗಿಲ್ಲ ಎನ್ನುವ ಎಲ್ಲಾ ಸಂಸ್ಥೆಗಳಲ್ಲೂ ನನ್ನನ್ನು ತಿರಸ್ಕರಿಸಿದ್ದರು. ಮಶ್ವರಂನಿಂದ ಯಶವಂತಪುರದ ಕಡೆಗೆ ನಡೆಯುತ್ತಾ ನನಗೆ ಗೊತ್ತಿಲ್ಲದೆ ಕಣ್ಣಲ್ಲಿ ನೀರು ಹರಿಯುತ್ತಿತ್ತು.

ಎಲ್ಲಾ ಸಿರಿವಂತರೂ ನೆಟ್‌ವರ್ಕ್ ಸೃಷ್ಟಿಸಿಕೊಂಡಿರುತ್ತಾರೆ ಮತ್ತು ಅಲ್ಲಿ ತಮ್ಮ ವಂಶದ ಕುಡಿಗಳಿಗೆ ಹೆಚ್ಚಿನ ಅವಕಾಶ ಕೊಡುತ್ತಾರೆ; ಹೀಗಾಗಿ ನಾವೆಷ್ಟೇ ಪ್ರಯತ್ನ ಪಟ್ಟರೂ ನಮಗೆ ಅವರಿಗೆ ಸಿಕ್ಕಿದ ಅವಕಾಶ ಸಿಕ್ಕುವುದಿಲ್ಲ ಎನ್ನುವುದನ್ನು ಬಲವಾಗಿ ನಂಬಿದ್ದೆ. ಬದುಕಿನಲ್ಲಿ ಅಂದುಕೊಂಡ ಯಾವ ಕಾರ್ಯವೂ ಸುಗಮವಾಗಿ ಆಗುತ್ತಿರಲಿಲ್ಲ.

ಇದೆಲ್ಲದರ ಜತೆಗೆ ಮನೆಯಲ್ಲಿ ಬಡತನವೂ ಇದ್ದರೆ ಕೀಳರಿಮೆ ಎನ್ನುವುದು ಬಹುಬೇಗ ಮನಸ್ಸಿನ ಮೇಲೆ ನಿಯಂತ್ರಣವನ್ನು ಸಾಧಿಸಿ ಬಿಡುತ್ತದೆ. ಹೀಗೆ ವಿಶ್ವಾಸವಿಲ್ಲದ ಮನಸ್ಸಿಗೆ ಹೇಳುವ ಯಾವ ಧನಾತ್ಮಕ ಮಾತುಗಳೂ ರುಚಿಸುವುದಿಲ್ಲ. ಬದಲಿಗೆ ಹಾಗೆ ಹೇಳಿದವರ ಮೇಲೂ ವೃಥಾ ಕೋಪ ಬರುತ್ತದೆ.




ನದಿಯನ್ನು ದಾಟಿ ಆ ಬದಿಗೆ ನಿಂತ ಮೇಲೆ ಈ ರೀತಿ ಬುದ್ಧಿ ಹೇಳುವುದು ಸುಲಭ ಎಂದು ಬುದ್ಧಿ ಹೇಳಿದವರ ಕುರಿತು ಕೂಡ ನಾವು ಕೇವಲವಾಗಿ ಮಾತನಾಡುತ್ತೇವೆ. ಈಗ ನಿಮ್ಮ ಪರಿಸ್ಥಿತಿ ಹೀಗಿದ್ದರೆ ಅದಕ್ಕೆ ಬೇಸರ ಪಟ್ಟುಕೊಳ್ಳಬೇಡಿ. ಮೊದಲೇ ಹೇಳಿದಂತೆ ನನ್ನ ಬದುಕಿನ ಪ್ರಥಮ 23 ವರ್ಷ ನಾನೂ ಕೂಡ ಇದೆ ರೀತಿಯ ಮನಸ್ಥಿತಿ ಹೊಂದಿದ್ದೆ!

ಈ ರೀತಿಯ ಮನಸ್ಥಿತಿ ಹೊಂದಿದ್ದರೆ ಅದು ನಿಮ್ಮ ತಪ್ಪಲ್ಲ. ನಮಗೆ ಆದ ಅನುಭವದ ಆಧಾರದ ಮೇಲೆ ನಾವು ಬದುಕನ್ನು ವಿವರಿಸುತ್ತಾ ಹೋಗುತ್ತೇವೆ.

ಮಲ್ಲೇಶ್ವರಂ ಮತ್ತು ಯಶವಂತಪುರದ ಮಧ್ಯದಲ್ಲಿ ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಆಫೀಸ್ ಕಣ್ಣಿಗೆ ಕಂಡಿತು. ಆ ಸಂಸ್ಥೆಯ ಹೆಸರು ಇಂದಿಗೂ ನನ್ನ ನೆನಪಲ್ಲಿ ಭದ್ರವಾಗಿದೆ. ಇವತ್ತಿಗೆ ಹೆಸರು ಬೇಕಿಲ್ಲ. ಘಟನೆ ಹೇಳುತ್ತೇನೆ. ಆ ಆಫೀಸ್ ಎದುರು ಆಡಿಟ್ ಅಸಿಸ್ಟಂಟ್ ಬೇಕಾಗಿದ್ದಾರೆ ಎಂದು ಬೋರ್ಡ್ ತೂಗುಹಾಕಿದ್ದರು. ಅದನ್ನು ಕಂಡು ಒಳಹೋಗಿದ್ದೆ. ಅವತ್ತಿಗೆ ನಾನು 140 ಕೆ.ಜಿ. ತೂಗುತ್ತಿದ್ದೆ. ನನ್ನ ಡ್ರೆಸ್ಸಿಂಗ್ ಸೆನ್ಸ್ ಆ ದೇವರಿಗೇ ಪ್ರೀತಿ!

ನನ್ನ ಸರ್ಟಿಫಿಕೇಟ್ ನೋಡಿ, ಇದು ನಿನ್ನದೇನು? ಎಂದು ಪ್ರಶ್ನಿಸಿದರು. ಹೌದು ಎಂದದ್ದಕ್ಕೆ, ಒಂದೆರಡು ಪ್ರಶ್ನೆ ಕೇಳಿದರು. ಗೊತ್ತಿದ್ದಷ್ಟು ಉತ್ತರಿಸಿದೆ. ಆದರೂ ಅವರಿಗೆ ಸಮಾಧಾನವಾಗಲಿಲ್ಲ.

ಇಂಗ್ಲಿಷ್ ಪತ್ರಿಕೆಯನ್ನು ನನ್ನ ಕೈಗಿಟ್ಟು, ಹತ್ತಾರು ಸಾಲು ಓದಲು ಹೇಳಿದರು. ಯಾವ ಪ್ರತಿಷ್ಠಿತ ಸಂಸ್ಥೆಗಳು ಕೂಡ ನನಗೆ ಕೆಲಸ ಕೊಡುತ್ತಿರಲಿಲ್ಲ, ಕಾರಣ ಕೂಡ ಹೇಳುತ್ತಿರಲಿಲ್ಲ, ಏಕೆ ಎನ್ನುವುದು




ಅವರು ಕೈಗೆ ಇಂಗ್ಲಿಷ್ ಪತ್ರಿಕೆ ಇಟ್ಟ ಕ್ಷಣ ನನಗೆ ಅರಿವಾಯ್ತು. ನನ್ನ ದೇಹಭಾಷೆ ಮತ್ತು ನನ್ನ ವಿದ್ಯಾಭ್ಯಾಸದ ಸರ್ಟಿಫಿಕೇಟ್ ಹೊಂದಾಣಿಕೆಯಾಗುತ್ತಿರಲಿಲ್ಲ! ಇಂಗ್ಲಿಷ್ ಪತ್ರಿಕೆಯನ್ನು ಚೆನ್ನಾಗಿ ಓದಿದೆ. ಆತ ನನಗೆ ಕೆಲಸ ಆಫರ್ ನೀಡಿದರು. ಅವರು ಹೇಳಿದ ವೇತನ ನನಗೆ ತುಂಬಾ ಕಡಿಮೆ ಎನ್ನಿಸಿ ಬೇಡ ಎಂದು ಹೊರ ಬಂದಿದ್ದೆ!

ಕೆಲಸಗಳು ಸಿಗದೆ ರಿಜೆಕ್ಷನ್ ಅನುಭವಿಸಿದ್ದ ನಾನು, ಸಿಕ್ಕ ಕೆಲಸವನ್ನು ರಿಜೆಕ್ಟ್ ಮಾಡಿದ್ದೆ. ಇವತ್ತಿಗೆ ಆ ನನ್ನ ನಿರ್ಧಾರ ನೆನಪಿಸಿಕೊಂಡು ಹೆಮ್ಮೆ ಎನ್ನಿಸುತ್ತದೆ. ಅವತ್ತು ಆ ಕೆಲಸಕ್ಕೆ ನಾನು ಅಡ್ಜ ಮಾಡಿಕೊಂಡಿದ್ದರೆ? ನಮ್ಮ ಬದುಕಿನಲ್ಲಿ ಯಾವುದೂ ನಾವೆಂದುಕೊಂಡಂತೆ ಆಗುತ್ತಿಲ್ಲ ಎಂದರೆ, ಅದು ಹೊಸ ಬದುಕಿಗೆ ನಮ್ಮನ್ನು ಸಜ್ಜು ಮಾಡುತ್ತಿದೆ ಎಂದರ್ಥ.

ಭಾರತದಲ್ಲಿ ಅನ್ನ ಹುಟ್ಟಿಸಿಕೊಳ್ಳುವ ಭಾಗ್ಯ ಅಂದಿಗೆ ನನಗೆ ಇರಲಿಲ್ಲ. ಆದರೆ ಅದು ಗೊತ್ತಾಗುವುದಾದರೂ ಹೇಗೆ? ಅಂದಿನ ವಯಸ್ಸಿನಲ್ಲಿ ಒಂದಲ್ಲ ಹತ್ತಾರು ಗುರುಗಳನ್ನು ಭೇಟಿ ಮಾಡಿದ್ದೆ. ತಿಳಿದವರು ಅನ್ನಿಸಿದವರನ್ನೆ ಮಾತನಾಡಿಸಿದ್ದೆ.

## ನಾವು 99 ರಿಂದ 1 ಪ್ರತಿಶತ ಜನರಲ್ಲಿ ಒಬ್ಬರಾಗಬೇಕು...

- ಹಿಡಿದ ಕೆಲಸವು ಬಯಸಿದ ಫಲಿತಾಂಶವನ್ನು ಕೊಡುವವರೆಗೆ ದುಡಿಯಬೇಕು.
- ದಣಿವಿನಲ್ಲೂ ದೃಢತೆ ಕಳೆದುಕೊಳ್ಳಬಾರದು.
- ನಾವು ಪ್ರತಿ ಕೆಲಸವನ್ನು ಶುರುಮಾಡಲು ಒಂದು ಕಾರಣವಿರುತ್ತದೆ.
- ಆ ಕಾರಣದ ಸಲುವಾಗಿ ನಾವು ಮಾಡುವ ಕೆಲಸವು ಫಲವನ್ನು ನೀಡುತ್ತದೆ.
- ಫಲಿತಾಂಶ ಯಾವಾಗಲೂ ನಾವು ಬಯಸಿದಂತೆಯೇ ಇರಬೇಕು ಎನ್ನುವಂತಿಲ್ಲ.
- ನಾವು ಬಯಸಿದ ಫಲಿತಾಂಶ ಸಿಕ್ಕರೆ ನಮ್ಮ ಸಿದ್ಧತೆ ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ಪ್ರೋಸೆಸ್ ಸರಿಯಾಗಿದೆ ಎಂದರ್ಥ.
- ಅದಿಲ್ಲದೆ ವ್ಯತಿರಿಕ್ತ ಫಲಿತಾಂಶ ಬಂದಿದ್ದರೆ, ನಮ್ಮ ಕೆಲಸದಲ್ಲಿ, ನಮ್ಮ ಪ್ರೋಸೆಸ್‌ನಲ್ಲಿ ಏನೋ ಎಡವಟ್ಟಾಗಿದೆ ಎಂದರ್ಥ.
- ಹೀಗಾಗಿ ಫಲಿತಾಂಶ ಏನೇ ಇರಲಿ ಅದು ಆಕ್ಸಿಡೆಂಟ್ ಅಲ್ಲ.
- ಅಚಾನಕ್ಕಾಗಿ ಏನೂ ಆಗುವುದಿಲ್ಲ.
- ಅದು ಒಂದಲ್ಲ ಹತ್ತಾರು ಸೂಚನೆಗಳನ್ನು ಕೊಟ್ಟಿರುತ್ತದೆ.
- ಆದರೆ ನಾವು ಅದನ್ನು ಅರಿತುಕೊಳ್ಳುವಲ್ಲಿ ಸೋತಿರುತ್ತೇವೆ.
- ಹಾಗೆ ನೋಡಲು ಹೋದರೆ ಆಕ್ಸಿಡೆಂಟ್ ಅಥವಾ ಅಪಘಾತ ಕೂಡ ನಿಜಾರ್ಥದಲ್ಲಿ ಅಪಘಾತವಲ್ಲ, ಅದು ಕೂಡ ಸೂಚನೆ ಕೊಟ್ಟಿರುತ್ತದೆ.

ಇನ್ನಷ್ಟು ಸಂಶಯ ಹೆಚ್ಚಾಗಿ ನೊಂದುಕೊಂಡಿದ್ದೆ. ಇಂಥ ಬದುಕನ್ನು ನನಗೇಕೆ ಕೊಟ್ಟೆ ಭಗವಂತ ಎಂದು ದೇವರನ್ನು ಕೂಡ ಬಯ್ದುಕೊಂಡಿದ್ದೆ! ಸಹಜವಾಗೇ ಎಲ್ಲರಿಗೂ ಆಗುವಂತೆ ನನಗೂ ಯಶಸ್ವಿಯಲ್ಲದ ಅಪ್ಪನ ಬಗ್ಗೆ ಬೇಸರ ಕೂಡ ಹುಟ್ಟಿತ್ತು. ಈತ ತನ್ನ ವೇಳೆಯನ್ನು ಸರಿಯಾಗಿ ದುಡಿಸಿಕೊಂಡಿದ್ದರೆ? ನನಗೆ ಇಂಥ ಕಷ್ಟ ಬರುತ್ತಿರಲಿಲ್ಲ ಎನ್ನುವ ಸ್ವಾನುಕಂಪದಿಂದ ತಾಸುಗಟ್ಟಲೆ ಅತ್ತಿದ್ದೇನೆ.

ನಮ್ಮ ಬದುಕನ್ನು ಬದಲಿಸುವ ದಿವ್ಯಮಂತ್ರ ನಮ್ಮ ಬಳಿಯಿದೆ. ಯಾವ ಗುರುವೂ ನೀಡಲಾಗದ ಉಪದೇಶವನ್ನು ಕೂಡ ನಮ್ಮ ಮನಸ್ಸು ನಮಗೆ ನೀಡಬಲ್ಲದು ಎನ್ನುವುದರ ಅರಿವು ನಮಗಾಗಬೇಕು. ಅದಾಗುವವರೆಗೂ ಬದುಕು ಜಾಳು ಜಾಳು. ಬ್ರಿಟಿಷರು ನಮ್ಮಲ್ಲಿ ಅವರ ಶಿಕ್ಷಣದ ಮೂಲಕ ಒಂದಂಶವನ್ನು ಬಹಳವಾಗಿ ತಲೆಯಲ್ಲಿರಿಸಿ ಹೋಗಿದ್ದಾರೆ.

ವಂಶವಾಹಿನಿಯಿಂದ ಬರುವುದು ಕೇವಲ ಕಾಯಿಲೆಗಳು ಎನ್ನುವುದು ಆ ಅಂಶ. ಕಾಯಿಲೆಗಳು ಬರುತ್ತವೆ ಎನ್ನುವುದು ನಿಜ. ಅದರ ಜತೆಗೆ ಸುಪ್ತವಾಗಿರುವ ಅನೇಕ ಶಕ್ತಿಗಳು ಕೂಡ ಬಂದಿರುತ್ತವೆ. ನಾವು ನಮ್ಮ ಬಗ್ಗೆ ಅಂದುಕೊಂಡದ್ದಕಿಂತ ಹೆಚ್ಚಿನ ಬಲಶಾಲಿಗಳೂ, ಬುದ್ಧಿವಂತರೂ ಆಗಿದ್ದೇವೆ ಎನ್ನುವುದರ ಅರಿವಾಗುವುದಿಲ್ಲ. ಆದರೆ ಇದು ನಿಜ.

ಕೇವಲ ರಿಜೆಕ್ಷನ್‌ಗಳನ್ನು ಕಂಡಿದ್ದ ಬದುಕಿನಲ್ಲಿ ಪ್ರಥಮ ಬಾರಿಗೆ ಸಿಕ್ಕ ಕೆಲಸವನ್ನು ರಿಜೆಕ್ಟ್ ಮಾಡಿದ್ದು ಒಂದು ರೀತಿಯಲ್ಲಿ ಹೊಸ ಆತ್ಮವಿಶ್ವಾಸವನ್ನು ತುಂಬಿತು. ಬದುಕು ನನಗಾಗಿ ಒಂದು ಬದುಕನ್ನು ಹೆಣೆಯುತ್ತಿತ್ತು. ಇದರ ಅರಿವಿಲ್ಲದ ನಾನು, ನನ್ನ ಸೋಲಿಗೆ ಕಾರಣವನ್ನು ಕಂಡುಕೊಂಡಿದ್ದೆ. ಹೀಗಾಗಿ ಅವುಗಳನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೆ.

ಸಿಕ್ಕ ಕೆಲಸವನ್ನು ರಿಜೆಕ್ಟ್ ಮಾಡಿದ ಒಂದೆರಡು ತಿಂಗಳಲ್ಲಿ ಸಂದರ್ಶನದಲ್ಲಿ ಪಾಸಾಗಿ ದುಬೈ ತಲುಪಿದೆ. ದುಬೈನಲ್ಲಿ ಕೂಡ ಮೂರು ತಿಂಗಳು ಕಳೆಯುವುದರಲ್ಲಿ ಯುರೋಪು ಸೇರಿಕೊಂಡೆ. ಅಂದುಕೊಂಡದ್ದು ಏನೂ ಆಗುತ್ತಿರದ ಬದುಕಿನಲ್ಲಿ ಅಂದುಕೊಳ್ಳದೆ ಬಹಳಷ್ಟು ಬದಲಾವಣೆಗಳು ಆಗತೊಡಗಿದವು.

ನಮ್ಮ ಸಮಯ ಬರುವವರೆಗೂ ತಾಳ್ಮೆಯಿಂದ ಕಾಯುವುದನ್ನು, ತಪ್ಪುಗಳು ಎನ್ನಿಸಿದರೆ ಅದನ್ನು ತಿದ್ದಿಕೊಳ್ಳುವುದನ್ನು ಮಾತ್ರ ನಿಲ್ಲಿಸಬಾರದು ಎನ್ನುವುದು ಬದುಕು ನನಗೆ ಕಲಿಸಿದ ಪಾಠ. ಇದೇನೋ ನಾನು ಮಹತ್ತರ ಸಾಧಿಸಿದ್ದೇನೆ ಎನ್ನುವುದರ ಬಗ್ಗೆಯಲ್ಲ. ಇವತ್ತಿಗೆ ರಿಜೆಕ್ಷನ್ ಅನುಭವಿಸುತ್ತಿರುವರಿಗೆ ಸಣ್ಣ ಸಮಾಧಾನ ಸಿಕ್ಕರೆ ಸಾಕು ಎನ್ನುವ ಭಾವನೆ ಅಷ್ಟೇ.

**- ರಂಗಸ್ವಾಮಿ** ಎಂ

# ಇರುವೆಗಳಿಂದ ಮದ್ದು ಮಾಡಿಸಿಕೊಳ್ಳುವ ಕಾಗೆ

> ಇರುವೆಗಳು ರಕ್ಷಣೆಗಾಗಿ ತಮ್ಮ ದೇಹದಿಂದ ಫಾರ್ಮಿಕ್ ಆಸಿಡ್ ಎಂಬ ರಾಸಾಯನಿಕವನ್ನು ಹೊರ ಹಾಕುತ್ತವೆ. ಈ ಆಮ್ಲವು ಕಾಗೆಯ ಪಾಲಿಗೆ ಅದ್ಭುತ ಸಂಹಾರಕ. ರೆಕ್ಕೆಗಳ ನಡುವೆ ಅಡಗಿರುವ ಬ್ಯಾಕ್ಟೀರಿಯಾ, ಶಿಲೀಂಧ್ರ ಮತ್ತು ಕ್ರಿಮಿಗಳನ್ನು ಈ ಆಮ್ಲವು ನಾಶಪಡಿಸುತ್ತದೆ. ಕಾಗೆ ಎಷ್ಟು ಜಾಣ ಎಂದರೆ, ಕೆಲವೊಮ್ಮೆ ತನ್ನ ಕೊಕ್ಕಿನಿಂದ ಇರುವೆಗಳನ್ನು ಹಿಡಿದು, ರೆಕ್ಕೆಗಳ ಕೆಳಗೆ ಎಲ್ಲಿ ಹೆಚ್ಚು ತುರಿಕೆ ಇದೆಯೋ ಅಲ್ಲಿ ಸಾವಕಾಶವಾಗಿ ಉಜ್ಜಿಕೊಳ್ಳುತ್ತದೆ.

ಒಂದೊಳ್ಳೆ ಮಾತು ಪ್ರಕೃತಿಯ ಅಖಾಡದಲ್ಲಿ ಬದುಕುಳಿಯುವುದು ಎಂದರೆ ಕೇವಲ ಓಡುವುದು ಅಥವಾ ಬೇಟೆ ಯಾಡುವುದು ಮಾತ್ರವಲ್ಲ; ಅದು ಕೆಲವೊಮ್ಮೆ ಅತ್ಯಂತ ನಿಗೂಢ ಮೌನದಿಂದಲೂ ಕೂಡಿರುತ್ತದೆ. ಒಂದು ಹಳೆಯ ಮರದ ಕೊಂಬೆಯ ಮೇಲೆ ಕಾಗೆಯೊಂದು ಭಾರವಾದ ಮನಸ್ಸಿನಿಂದ ಕುಳಿತಿದೆ. ಅದರ ರೆಕ್ಕೆಗಳು ಎಂದಿನಂತೆ ಚುರುಕಾಗಿಲ್ಲ.

ರೆಕ್ಕೆಗಳ ಒಳಗೆ ಕಣ್ಣಿಗೆ ಕಾಣದ ನೂರಾರು ಪರಾವಲಂಬಿ ಕ್ರಿಮಿಗಳು ಅದರ ಚರ್ಮವನ್ನು ಕಚ್ಚುತ್ತಿವೆ. ಆ ತುರಿಕೆ, ಆ ಕಿರಿಕಿರಿ ಅಸಹನೀಯವಾಗಿದೆ. ಆದರೆ, ಕಾಗೆ ಗಾಬರಿಯಾಗುವುದಿಲ್ಲ, ದಿಕ್ಕಾ ಪಾಲಾಗಿ ಹಾರುವುದಿಲ್ಲ. ಬದಲಿಗೆ, ತನ್ನ ಪೂರ್ವಜರಿಂದ ಬಳುವಳಿಯಾಗಿ ಬಂದ ಜ್ಞಾನದಂತೆ ಅದು ಮೌನವಾಗಿ ಕೆಳಕ್ಕೆ ಇಳಿಯುತ್ತದೆ.

ಅದು ಬಂದು ಕೂರುವುದು ಒಂದು ಇರುವೆಯ ಗೂಡಿನ ಮುಂದೆ. ಇತರ ಪ್ರಾಣಿಗಳಿಗೆ ಇರುವೆಯ ಗೂಡು ಎಂದರೆ ಅಪಾಯದ ತಾಣ, ಆದರೆ ಈ ಕಾಗೆಗೆ ಅದು ಒಂದು ಜೀವಂತ ಔಷಧಾಲಯ. ಕಾಗೆ ನೆಲದ ಮೇಲೆ ಕುಳಿತು ತನ್ನ ರೆಕ್ಕೆಗಳನ್ನು ಅಗಲವಾಗಿ ಹರಡುತ್ತದೆ. ನೂರಾರು ಇರುವೆಗಳು ತನ್ನ ದೇಹದ ಮೇಲೆ ಹರಿದಾಡಲು ಅದು ಅವಕಾಶ ಮಾಡಿಕೊಡುತ್ತದೆ.

ಮೇಲ್ನೋಟಕ್ಕೆ ಇದು ಕಾಗೆಯ ಸೋಲಿನಂತೆ ಕಂಡರೂ, ವಾಸ್ತವದಲ್ಲಿ ಇದು ಅದರ ಅದ್ಭುತ ಚಿಕಿತ್ಸಾ ತಂತ್ರ. ವಿಜ್ಞಾನಿಗಳು ಇದನ್ನು ಆಂಟಿಂಗ್ ಎಂದು ಕರೆಯುತ್ತಾರೆ.

ಇರುವೆಗಳು ರಕ್ಷಣೆಗಾಗಿ ತಮ್ಮ ದೇಹದಿಂದ ಫಾರ್ಮಿಕ್ ಆಸಿಡ್ ಎಂಬ ರಾಸಾಯನಿಕವನ್ನು ಹೊರ ಹಾಕುತ್ತವೆ. ಈ ಆಮ್ಲವು ಕಾಗೆಯ ಪಾಲಿಗೆ ಅದ್ಭುತ ಸಂಹಾರಕ. ರೆಕ್ಕೆಗಳ ನಡುವೆ ಅಡಗಿರುವ ಬ್ಯಾಕ್ಟೀರಿಯಾ, ಶಿಲೀಂಧ್ರ ಮತ್ತು ಕ್ರಿಮಿಗಳನ್ನು ಈ ಆಮ್ಲವು ನಾಶ ಪಡಿಸುತ್ತದೆ. ಕಾಗೆ ಎಷ್ಟು ಜಾಣ ಎಂದರೆ, ಕೆಲವೊಮ್ಮೆ ತನ್ನ ಕೊಕ್ಕಿನಿಂದ ಇರುವೆಗಳನ್ನು ಹಿಡಿದು, ರೆಕ್ಕೆಗಳ ಕೆಳಗೆ ಎಲ್ಲಿ ಹೆಚ್ಚು ತುರಿಕೆ ಇದೆಯೋ ಅಲ್ಲಿ ಸಾವಕಾಶವಾಗಿ ಉಜ್ಜಿ ಕೊಳ್ಳುತ್ತದೆ.


ಇದು ಒಬ್ಬ ತಾಯಿ ಮಗುವಿನ ಗಾಯಕ್ಕೆ ಮದ್ದು ಹಚ್ಚುವಷ್ಟೇ ನಾಜೂಕಾದ ಕ್ರಿಯೆ. ಕೆಲವೊಮ್ಮೆ ಬದುಕಿನಲ್ಲಿ ನಮಗೆ ನೋವಾದಾಗ, ಕಿರಿಕಿರಿಯಾದಾಗ ನಾವು ಮನುಷ್ಯರಿಂದ ದೂರ ಓಡುತ್ತೇವೆ. ಆದರೆ ಈ ಕಾಗೆ ಕಲಿಸುವ ಪಾಠವೆಂದರೆ ಗುಣವಾಗಬೇಕೆಂದರೆ ನಾವು ಕೆಲವೊಮ್ಮೆ ಅಷ್ಟೇ ವಿನಯದಿಂದ ನಮಗಿಂತ ಸಣ್ಣವರ ಬಳಿ ಹೋಗಬೇಕಾಗುತ್ತದೆ.

ತಾನು ಬಲಿಷ್ಠ ಪಕ್ಷಿ ಎಂಬ ಅಹಂಕಾರ ತೊರೆದು, ಪುಟ್ಟ ಇರುವೆಗಳ ಮುಂದೆ ಶರಣಾದಾಗ ಮಾತ್ರ ಅದಕ್ಕೆ ವಿಮುಕ್ತಿ ಸಿಗುತ್ತದೆ. ಕಾಗೆಗೆ ರಸಾಯನಶಾಸ್ತ್ರ ತಿಳಿದಿಲ್ಲ, ಅದಕ್ಕೆ ಯಾವುದೇ ವೈದ್ಯಕೀಯ ಪದವಿ ಇಲ್ಲ. ಆದರೆ ಪ್ರಕೃತಿಯ ಜತೆ ಹೇಗೆ ಸಮತೋಲನದಿಂದ ಬದುಕಬೇಕು ಎಂಬ ಮೌನಜ್ಞಾನ ಅದಕ್ಕಿದೆ. ಈ ಜ್ಞಾನವು ಯಾವುದೇ ಪುಸ್ತಕದಲ್ಲಿ ಬರೆದಿಲ್ಲ, ಅದು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಕೇವಲ ವೀಕ್ಷಣೆಯ ಮೂಲಕ ಹರಿದು ಬಂದಿದೆ.

ಚಿಕಿತ್ಸೆ ಮುಗಿದ ನಂತರ, ಕಾಗೆ ತನ್ನ ರೆಕ್ಕೆಗಳನ್ನು ಒಮ್ಮೆ ಜೋರಾಗಿ ಕೊಡವುತ್ತದೆ. ಈಗ ಅದರ ಮೈಮೇಲಿದ್ದ ಕಿರಿಕಿರಿ ಮಾಯವಾಗಿದೆ, ಭಾರ ಇಳಿದಿದೆ ಎಂದರ್ಥ. ಅದು ಒಮ್ಮೆ ಜೋರಾಗಿ ಕಾವ್ ಕಾವ್ ಎಂದು ಕೂಗಿ ನೀಲಾಕಾಶಕ್ಕೆ ಜಿಗಿಯುತ್ತದೆ. ಕಾಗೆ ಇದನ್ನು ಔಷಧ ಎಂದು ಕರೆಯುವುದಿಲ್ಲ, ಆದರೆ ಅದು ಕೆಲಸ ಮಾಡುತ್ತದೆ. ಬದುಕಿನಲ್ಲಿ ಅನೇಕ ತೊಂದರೆಗಳು ಹೇಳಿ ಬರುವುದಿಲ್ಲ, ಕೆಲವೊಮ್ಮೆ ಅವುಗಳನ್ನು ಹೇಳಿಕೊಂಡರೂ ಬೇರೆಯವರಿಗೆ ಅರ್ಥವಾಗುವುದಿಲ್ಲ.

ತಮಾಷೆ ಎಂದರೆ ಅವರಿಗೆ ಅದು ತೊಂದರೆ ಎಂದೇ ಅನಿಸುವುದಿಲ್ಲ. ಅಂಥ ಸಮಯದಲ್ಲಿ ನಮ್ಮ ತೊಂದರೆಗಳಿಗೆ ನಾವೇ ಪರಿಹಾರವನ್ನು ಕಂಡುಕೊಳ್ಳಬೇಕು. ಎಲ್ಲಕ್ಕೂ ಕೆಲವೊಮ್ಮೆ ಒಂದೇ ರೀತಿಯ ಪರಿಹಾರ ಇರುವುದಿಲ್ಲ. ಬದುಕಿನ ಪ್ರಶ್ನೆಪತ್ರಿಕೆಗೆ ನಾವು ಉತ್ತರ ಕಂಡುಕೊಳ್ಳುವಷ್ಟರಲ್ಲಿ, ಪ್ರಶ್ನೆಪತ್ರಿಕೆಯೇ ಬದಲಾಗಿ ಹೋಗಿರುತ್ತದೆ. ಆದ್ದರಿಂದಲೇ ಸಮಸ್ಯೆ ಬಂದಾಗ ಧೃತಿಗೆಡದೆ ನಾವು ಎಲ್ಲಿ ಸಹಾಯ ಕೇಳಬೇಕು ಮತ್ತು ಹೇಗೆ ತಾಳ್ಮೆಯಿಂದ ಇರಬೇಕು ಎಂದು ತಿಳಿದುಕೊಂಡರೆ, ಬದುಕು ಸಹನೀಯವಾಗುತ್ತದೆ.

**- ರೂಪಾ** ಗುರುರಾಜ್



# ಸೇವೆಗಿಂತ ಪ್ರೀತಿ ಮುಖ್ಯ ಎಂಬ ತತ್ವ ಪಾಲಿಸೋಣ

## ಹುತಾತ್ಮರ ದಿನಾಚರಣೆಯಲ್ಲಿ ಯಡೇಹಳ್ಳಿ ಮಂಜುನಾಥ್ | ಪಕ್ಷ ಸಂಘಟನೆಗೆ ಸಲಹೆ

• ಪ್ರಜೋದಯ ವರದಿ

**ಸಕಲೇಶಪುರ:** ಸೇವೆಗಿಂತ ಪ್ರೀತಿ ಮುಖ್ಯವೆಂಬ ಡಾ.ಬಿ.ಆರ್.ಅಂಬೇಡ್ಕರ್ ತತ್ವಾದರ್ಶವನ್ನು ಎಲ್ಲರೂ ಪಾಲಿಸಬೇಕೆಂದು ಕೆಪಿಸಿಸಿ ಸದಸ್ಯ ಯಡೇಹಳ್ಳಿ ಆರ್.ಮಂಜುನಾಥ್ ಅವರು ಹೇಳಿದರು.

ತಾಲ್ಲೂಕಿನ ಬೆಳಗೋಡು ಹೋಬಳಿ ಮೂಗಲಿ ಗ್ರಾಮದಲ್ಲಿ ಕಾಂಗ್ರೆಸ್‌ನಿಂದ ಶುಕ್ರವಾರ ಆಯೋಜಿಸಿದ್ದ ಹುತಾತ್ಮರ ದಿನಾಚರಣೆ ಹಾಗು ಜಿಲ್ಲಾ ಕಾಂಗ್ರೆಸ್ ವಕ್ತಾರರಾಗಿ ನೇಮಕಗೊಂಡ ಕೊಲ್ಲಹಳ್ಳಿ ಸಲೀಂ ಅವರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಗಾಂಧೀಜಿ ಅಹಿಂಸೆಯ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಪ್ರಧಾನಿಯಾಗುವ ಅರ್ಹತೆ ಇದ್ದರೂ ನಿರಾಕರಿಸಿ ಜಗತ್ತಿಗೆ ಮಾದರಿಯಾದರು. ಅವರ ಸ್ಮರಣಾರ್ಥ ಹುತಾತ್ಮರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಕಳೆದರೂ ಕಾಡಾನೆ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಸಾಧ್ಯವಾಗುತ್ತಿಲ್ಲ. ದಾಳಿಯಿಂದ ಮೃತರಿಗೆ 15 ಲಕ್ಷ ರೂ. ಪರಿಹಾರ ನಿಗದಿಪಡಿಸಿ ನಮ್ಮನ್ನು ಹರಾಜಿಗೆ ಇಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಖಂಡ ಹೆಗ್ಗೋಡೆ ಪುಟ್ಟಣ್ಣ ಅವರು ಮಾತನಾಡಿ, ಇರುವೆಗಳು ಕಟ್ಟಿದ ಗೂಡನ್ನು ಕೆಲ ಕೊಳಕು ಮನಸ್ಸಿನವರು ಹಾಳು ಮಾಡುತ್ತಿದ್ದಾರೆ. ಬೆಳಗೋಡು ಹೋಬಳಿ ವ್ಯಾಪ್ತಿಯಲ್ಲಿ ಇದು ಎರಡನೇ ಸಭೆಯಾಗಿದ್ದು, ಮುಂದಿನ ದಿನಗಳಲ್ಲಿ ಏಕಪಕ್ಷೀಯ ತೀರ್ಮಾನಗಳಿಗೆ ಅವಕಾಶ ನೀಡದೆ ಪಕ್ಷಕ್ಕೆ ದುಡಿದವರಿಗೆ ಆದ್ಯತೆ ನೀಡಬೇಕು ಎಂದರು.

**ಪಕ್ಷ ಸಂಘಟನೆಗೆ ಹಿನ್ನಡೆ:**

ಬಾಗೆ ನೀಲಣ್ಣ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಪಕ್ಷದ ಕಾರ್ಯಕ್ರಮಗಳು ಕುಂಠಿತಗೊಂಡಿವೆ. ಈ ಹಿನ್ನಲೆಯಲ್ಲಿ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಭೆ ನಡೆಸಲು ತೀರ್ಮಾನಿಸಲಾಗಿದೆ. ಈ ಕ್ಷೇತ್ರದಲ್ಲಿ ಗೆದ್ದ ಶಾಸಕರು ಸೌಮ್ಯ ಸ್ವಭಾವದವರಾಗಿದ್ದರೂ ಹೊರಗಿನವರ ಗುಂಡಾ ವರ್ತನೆಯನ್ನು ಎಲ್ಲರೂ ನೋಡುತ್ತಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯ ನಂತರ ನಡೆದ ಸಭೆಯಲ್ಲಿ ಲಿಂಗಾಯತರು ಹಾಗು ಒಕ್ಕಲಿಗರು ಕಾಂಗ್ರೆಸ್‌ಗೆ ಮತ ನೀಡುತ್ತಾರೆ ಎಂಬ ಹೇಳಿಕೆ ನೀಡಿದ ಮುಖಂಡನ ಮಾತು ಇನ್ನೂ ಮರೆತಿಲ್ಲ. ಆ ನಾಯಕ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಪಕ್ಷದ ಗೊಂದಲಗಳನ್ನು ಸರಿಪಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ವಿಧಾನಸಭೆ ಪರಾಜಿತ ಅಭ್ಯರ್ಥಿಯೊಬ್ಬರ ವಿರುದ್ಧ ಹರಿಹಾಯ್ದರು.

ಜಿಲ್ಲಾ ಉಪಾಧ್ಯಕ್ಷ ಹಾನುಬಾಳ್ ಭಾಸ್ಕರ್ ಅವರು ಮಾತನಾಡಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರನೇ ವರ್ಷಕ್ಕೆ ಕಾಲಿಟ್ಟರೂ ಕಾರ್ಯಕರ್ತರ ನೋವುಗಳನ್ನು ಆಲಿಸುವವರು ಇಲ್ಲದಂತಾಗಿದೆ. ಐದು ಗ್ಯಾರಂಟಿಗಳನ್ನು ನೀಡಿದರೂ ಜನರಿಗೆ ಸಮರ್ಪಕವಾಗಿ ತಲುಪುತ್ತಿಲ್ಲ. ಕಾಂಗ್ರೆಸ್‌ನಲ್ಲಿ ಜಾತಿ ಇಲ್ಲವೆಂದು ಹೇಳುತ್ತಿದ್ದರೂ, ಜಾತಿ ಆಧಾರಿತ ಸಭೆಗಳು ನಡೆಯುತ್ತಿರುವುದು ಸರಿಯಲ್ಲ. ಪ್ರಾಮಾಣಿಕವಾಗಿ ದುಡಿದವರನ್ನು ಮೂಲೆಗುಂಪು ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡರಾದ ಬಾಚಿಹಳ್ಳಿ ಪ್ರತಾಪ್‌ಗೌಡ, ದೊಡ್ಡದೀಣೆ ಮಂಜಣ್ಣ, ಎಸ್.ಭುವನಾಕ್ಷ, ಶಬ್ಬೀರ್‌ಜಾನ್, ತುಳಸಿ ಪ್ರಸಾದ್, ಬಸವರಾಜ್, ಶೇಖರಯ್ಯ, ಪ್ರದೀಪ್ ಸಕ್ಪಾಲ್ ಇತರರಿದ್ದರು.



**ಮೂಲ ಕಾರ್ಯಕರ್ತರ ಕಡೆಗಣನೆ ಆರೋಪ**

ಜಿಲ್ಲಾ ವಕ್ತಾರ ಕೊಲ್ಲಹಳ್ಳಿ ಸಲೀಂ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಬ್ಲಾಕ್ ಸಮಿತಿ ವಿಸ್ತರಣೆ ಆಗಿಲ್ಲ, ಪಕ್ಷಕ್ಕೆ ಏನೂ ಕೊಡುಗೆ ಸಲ್ಲಿಸದವರಿಗೆ ಆದ್ಯತೆ ನೀಡಲಾಗುತ್ತಿದೆ. ಸಮನ್ವಯ ಸಮಿತಿ ಇಲ್ಲದೆ, ಪ್ರಶ್ನೆ ಕೇಳಿದರೆ ಕಡೆಗಣಿಸಲಾಗುತ್ತಿದೆ. ತಳಮಟ್ಟದಲ್ಲಿ ಪಕ್ಷ ಸಂಘಟನೆ ಬಲಪಡಿಸಿ, ಅಧಿಕಾರ ವಿಕೇಂದ್ರಿಕರಣ ಮಾಡಬೇಕು. ಅಧ್ಯಕ್ಷರು ಹಾಗು ಪರಾಜಿತ ಅಭ್ಯರ್ಥಿಗಳನ್ನು ಒಟ್ಟಾಗಿ ಕರೆದುಕೊಂಡು ಹೋದರೆ ಮಾತ್ರ ಪಕ್ಷವನ್ನು ಅಧಿಕಾರಕ್ಕೆ ತರಲು ಸಾಧ್ಯ ಎಂದು ಹೇಳಿದರು.

# ಆಟೋ ಮೇಲೆ ಕಾಡುಕೋಣ ದಾಳಿ: ಇಬ್ಬರಿಗೆ ಗಾಯ

• ಪ್ರಜೋದಯ ವರದಿ

**ಅರೇಹಳ್ಳಿ:** ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿಯಿಂದ ರೋಸಿ ಹೋದ ಜನತೆಗೆ ಇದೀಗ ಕಾಡುಕೋಣಗಳ ಹಾವಳಿ ಕಂಡು ನಿತ್ಯ ನಿದ್ದೆಗೆಡುವುದಲ್ಲದೆ, ಆತಂಕದಲ್ಲೇ ಜೀವನ ದೂಡುವಂತಾಗಿದೆ.

ಬೇಲೂರು ತಾಲ್ಲೂಕಿನ ಅರೇಹಳ್ಳಿ ಭಾಗದಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ಕಾಡಾನೆಗಳ ಹಾವಳಿಯಿಂದ ಸಾಕಷ್ಟು ಬೆಳೆ ಹಾನಿ, ಪ್ರಾಣಹಾನಿಗಳಾಗಿದ್ದರೂ ಇದುವರೆಗೆ ಶಾಶ್ವತ ಪರಿಹಾರ ಸಿಗದೆ ಇರುವ ಬೆನ್ನಲ್ಲೇ ಇಂದು ಕಾಡುಕೋಣಗಳು ನಡೆಸಿದ ಆಟೋ ಮೇಲಿನ ದಾಳಿಯನ್ನು ಕಂಡ ಸ್ಥಳೀಯರು ಹಾಗೂ ಕೃಷಿಕರು ಇನ್ನಷ್ಟು ಆತಂಕಕ್ಕೀಡಾಗಿದ್ದಾರೆ.

**ಘಟನೆ ವಿವರ:** ಶುಕ್ರವಾರ ಬೆಳಿಗ್ಗೆ ಸುಮಾರು 8.30ರ ವೇಳೆಯಲ್ಲಿ ಅರೇಹಳ್ಳಿ ಸಮೀಪವಿರುವ ಬಿ.ಆರ್.ಎಲ್ ಎಸ್ಟೇಟ್ ಬಳಿ ಮಲಸಾವರ ಗ್ರಾಮದಿಂದ ಅರೇಹಳ್ಳಿ ಪಟ್ಟಣಕ್ಕೆ ಬರುತ್ತಿದ ಆಟೋ ಮೇಲೆ ಕಾಡುಕೋಣವೊಂದು ಏಕಾಏಕಿ ದಾಳಿ ನಡೆಸಿ ಆಟೋವನ್ನು ರಸ್ತೆಯ ಬದಿಯ ಚರಂಡಿಗೆ ಎತ್ತಿ ಬಿಸಾಡಿದೆ, ಇದರಿಂದ ಆಟೋ ಚಾಲಕ ಮಹಮ್ಮದ್ ಆಲಿ ಹಾಗೂ ಹಿಂಬದಿಯಲ್ಲಿ ಕುಳಿತ್ತಿದ್ದ ಪ್ರಯಾಣಿಕ ಮಹಿಳೆ ಪಲ್ಲವಿ ಎಂಬುವವರಿಗೆ ತಲೆ,ಕೈ ಕಾಲು ಹಾಗೂ ದೇಹದ ಇತರೆ ಭಾಗಗಳಿಗೆ ಗಾಯಗಳಾಗಿವೆ. ಆಟೋ ಜಖಂಗೊಂಡು ಚರಂಡಿಯಲ್ಲಿ ಮಗಚಿ ಬಿದ್ದಿದೆ, ಸ್ಥಳೀಯರು ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ.



ನಮ್ಮ ಬಾಗದಲ್ಲಿ ನಿತ್ಯ ಕಾಡಾನೆಗಳ ಹಾವಳಿಯಿಂದ ರಸ್ತೆಯಲ್ಲಿ ಜನಸಾಮಾನ್ಯರು ತಿರುಗಾಡಲು ಭಯಪಡುವಂತಾಗಿದೆ. ಇವುಗಳ ನಡುವೆ ಇತ್ತೀಚೆಗೆ ಕಾಡುಕೋಣಗಳ ತಿರುಗಾಟವು ಹೆಚ್ಚಾಗಿದೆ, ಆಟೋ ಚಾಲನೆಯಿಂದಲೇ ನಮ್ಮ ಜೀವನ ಸಾಗುತ್ತಿದ್ದು, ಆತಂಕ ಮೂಡಿಸುತ್ತಿದೆ. ಜಖಂಗೊಂಡ ಆಟೋಗೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಕಾಡು ಪ್ರಾಣಿಗಳ ಹಾವಳಿ ಬಗ್ಗೆ ಜನಪ್ರತಿನಿಧಿಗಳು ಸರ್ಕಾರಕ್ಕೆ ಸರಿಯಾದ ಮಾಹಿತಿ ನೀಡಿ ಶಾಶ್ವತ ಪರಿಹಾರ ಒದಗಿಸಬೇಕು.

– ಚಾರ್ಲಿ ಚಂದನ್, ಆಟೋ ಚಾಲಕ.

# ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಮುಖ್ಯ

• ಪ್ರಜೋದಯ ವರದಿ

**ಹಾಸನ:** ಮಹಿಳೆಯರು ಉಳಿತಾಯ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಹಾಗೂ ಪೋಕ್ಸೋ ಕಾಯ್ದೆಯ ನಿಯಮಗಳ ಬಗ್ಗೆ ತಿಳಿದುಕೊಳ್ಳಬೇಕಲ್ಲದೆ, ಮಕ್ಕಳ ಬೆಳವಣಿಗೆಯಲ್ಲಿ ಪೋಷಕರು ಬಹು ಮುಖ್ಯ ಪಾತ್ರವನ್ನು ವಹಿಸಬೇಕು ಎಂದು ಡಿವೈಎಸ್ಪಿ ಗಂಗಾಧರಪ್ಪ ಅವರು ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದು ಹಮ್ಮಿಕೊಂಡಿದ್ದ ಶಾಂತಿಗ್ರಾಮ ತಾಲ್ಲೂಕು ಸತ್ಯಮಂಗಲ ವಲಯಮಟ್ಟದ ಸಾಧನ ಸಮಾವೇಶ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಾಡುತ್ತಿರುವ ಸಮಾಜಮುಖಿ ಕೆಲಸಗಳ ಕುರಿತು ಅವರು ಮೆಚ್ಚುಗೆ ವ್ಯಕ್ತಪಡಿಸಿದರು



ಜಿಲ್ಲಾ ಕಸಾಪ ಅಧ್ಯಕ್ಷ ಎಲ್.ಎಚ್. ಮಲ್ಲೇಶಗೌಡ ಅವರು ಮಾತನಾಡಿ, ಮಕ್ಕಳಿಗೆ ಸಂಸ್ಕೃತಿ ಸಂಸ್ಕಾರವನ್ನು ನೀಡುವುದು ಹಾಗೂ ಆಧುನಿಕ ಯುಗದಲ್ಲಿ ಮಕ್ಕಳಿಗೆ ನೈತಿಕತೆಯನ್ನು ಬೆಳೆಸುವುದರ ಬಗ್ಗೆ ತಿಳಿಸಿದರು.

ಯೋಗ ಗುರು ಸುರೇಶ ಗುರೂಜಿ ಅವರು ಮಾತನಾಡಿ, ಕಾರ್ಯಕ್ರಮಗಳ ಮಾನಸಿಕ ಒತ್ತಡ ನಿರ್ವಹಣೆ ಬಹಳ ಮುಖ್ಯ ಯೋಗ ಮತ್ತು ಮೆಡಿಟೇಷನ್ ನಿಯಮಿತ ವ್ಯಾಯಾಮ ಮಾಡುವುದು, ಸಾಕಷ್ಟು ನಿದ್ದೆ ಮಾಡುವುದು, ಸ್ನೇಹಿತರೊಂದಿಗೆ ಮಾತನಾಡುವುದು, ಹೊಸ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು ಹಾಗೂ ಶಿಕ್ಷಣವು ನಮ್ಮ ಜೀವನದಲ್ಲಿ ಬಹಳ ಮುಖ್ಯ ಎಂದು ಅವರು ಹೇಳಿದರು.

ನಮಗೆ ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳನ್ನು ಪಡೆಯಲು ಸಹಾಯ ಮಾಡುತ್ತದೆ. ವೃತ್ತಿ ಜೀವನದಲ್ಲಿ ಮುನ್ನಡೆಯಲು ಸಹಾಯ ಮಾಡುತ್ತದೆ. ಸಮಾಜದಲ್ಲಿ ಗೌರವ ಮತ್ತು ಸ್ಥಾನಮಾನವನ್ನು ನೀಡುತ್ತದೆ ಎಂದ ಅವರು, ಸ್ವಾವಲಂಬನೆ ಮತ್ತು ಸ್ವಾತಂತ್ರ್ಯವನ್ನು ನೀಡುತ್ತದೆ. ಇದರ ಸದುಪಯೋಗಪಡಿಸಿಕೊಳ್ಳುವ ಕುರಿತು ಮಾಹಿತಿಯನ್ನು ನೀಡಿದರು.

ತಾಲ್ಲೂಕಿನ ಯೋಜನಾಧಿಕಾರಿಗಳು ಯೋಜನೆಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ರಮೇಶ್, ಒಕ್ಕೂಟದ ಅಧ್ಯಕ್ಷರಾದ ರಾಣಿ, ವಲಯದ ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಉತ್ತಮ ಆರೋಗ್ಯಕ್ಕೆ ಕ್ರೀಡೆಯಲ್ಲಿ ಪಾಲ್ಗೊಳ್ಳಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಆರೋಗ್ಯದ ದೃಷ್ಟಿಯಿಂದ ಕ್ರೀಡಾ ಮನೋಭಾವ ಬೆಳೆಸಿಕೊಳ್ಳುವುದು ಒಳ್ಳೆಯದು ಎಂದು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಯುವರಾಜ್ ಅವರು ಹೇಳಿದರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿ ಪ್ರಯುಕ್ತ ಶುಕ್ರವಾರ ಆಯೋಜಿಸಿದ್ದ ಟೀ ಶರ್ಟ್ ಬಿಡುಗಡೆ ಹಾಗೂ ಟ್ರೋಫಿ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕ್ರೀಡೆಯ ಜೊತೆಗೆ ಸ್ನೇಹ ಹಾಗೂ ಸೌಹಾರ್ದತೆ ಮುಖ್ಯ ಎಂದರು.

ಕ್ರೀಡೆ ಎಂಬುದು ಮನರಂಜನೆಯಾಗಿರಬೇಕು ಅಷ್ಟೇ. ಗೆಲುವು ಹಾಗೂ ಸೋಲನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಸೋತ ತಕ್ಷಣ ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು. ಗೆಲುವು ಒಂದು ಗುರಿಯಾಗಿರಬೇಕು ಹೊರತು ಗೆಲುವೇ ಉದ್ದೇಶವಾಗಿರಬಾರದು. ಸೋಲಿನ ನಂತರ ಗೆಲುವು ಇದ್ದೇ ಇರುತ್ತದೆ ಎಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಎನ್. ದೀಪ ಅವರು ಮಾತನಾಡಿ, ಕ್ರೀಡಾಪಟುಗಳಲ್ಲಿ ಶ್ರದ್ದೆ, ಶಿಸ್ತು ಹಾಗೂ ಕಠಿಣ ಪರಿಶ್ರಮ ಅಗತ್ಯವಿದೆ. ನಿರಂತರ ಅಭ್ಯಾಸದಿಂದ ಯಾವುದೇ ಕ್ರೀಡೆಯಲ್ಲಿ ಭಾಗವಹಿಸಿದರೆ ಸಾಧನೆಯ ಗುರಿ ಸುಲಭವಾಗಲಿದೆ ಎಂದರು.

ವಿವಿಧ ಇಲಾಖೆಗಳ ಅಧಿಕಾರಿಗಳು ಟೀ ಶರ್ಟ್ ಬಿಡುಗಡೆಗೊಳಿಸಿ ಟ್ರೋಫಿ ಅನಾವರಣ ಮಾಡಿದರು.

ತಾಲ್ಲೂಕು ಅಧ್ಯಕ್ಷ ದಯಾನಂದ್ ಶೆಟ್ಟಿಹಳ್ಳಿ, ಉಪಾಧ್ಯಕ್ಷ ನಂದನ್ ಪುಟ್ಟಣ್ಣ, ಕೆ.ಪಿ.ಪುಟ್ಟರಾಜು, ಪ್ರಧಾನ ಕಾರ್ಯದರ್ಶಿ ಆರ್.ಶ್ರೀನಿವಾಸ್ ಉಳ್ಳಾವಳ್ಳಿ, ಕಾರ್ಯದರ್ಶಿಗಳಾದ ಜಯಕುಮಾರ್, ನಾಗೇಂದ್ರ, ಖಜಾಂಚಿ ಎ.ಎಲ್.ನಾಗೇಶ್, ನಿಕಟಪೂರ್ವ ಅಧ್ಯಕ್ಷ ಸಿದ್ದರಾಜು, ನಿರ್ದೇಶಕರಾದ ಎ.ನಟೇಶ್, ಪಾಂಡುರಂಗ, ಸದಸ್ಯರಾದ ಹಿ.ಕೃ.ಚಂದ್ರು, ಮಂಜುನಾಥ್ ಹಂಚೀಹಳ್ಳಿ, ಐ.ಕೆ.ಮಂಜುನಾಥ್, ಪ್ರದೀಪ್, ಗೋವಿಂದ್, ಗೋವಿಂದರಾಜ್ ಹಾಗೂ ಎಲ್ಲಾ ಇಲಾಖೆಗಳ ಅಧಿಕಾರಿಗಳು ಇನ್ನಿತರರು ಈ ಸಂದರ್ಭದಲ್ಲಿ ಹಾಜರಿದ್ದರು.



# ರಕ್ತದಾನವು ಜೀವ ಉಳಿಸುವ ಮಹತ್ತರ ಸೇವೆ

• ಪ್ರಜೋದಯ ವರದಿ

**ಹಾಸನ:** ರಕ್ತದಾನ ಮಾಡುವುದರಿಂದ ದಾನಿಯ ಆರೋಗ್ಯಕ್ಕೂ ಯಾವುದೇ ಹಾನಿಯಿಲ್ಲ, ಬದಲಾಗಿ ಅದು ಮತ್ತೊಂದು ಅಮೂಲ್ಯ ಜೀವವನ್ನು ಉಳಿಸುವ ಮಹತ್ತರ ಸೇವೆಯಾಗಿದೆ ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕಿ ಡಾ. ಆರ್. ಎನ್.ರಂಗಲಕ್ಷ್ಮಿ ಅವರು ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನ, ನಿಸರ್ಗ ಕಾಲೇಜು ಆಫ್ ನರ್ಸಿಂಗ್ ಹಾಸನ ಹಾಗೂ ಯುವ ರೆಡ್ ಕ್ರಾಸ್ ಘಟಕ ಹಾಸನ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಕ್ತವನ್ನು ಎ, ಬಿ, ಎಬಿ ಮತ್ತು ಓ ಎಂಬ ನಾಲ್ಕು ಗುಂಪುಗಳಾಗಿ ವಿಭಾಗಿಸಲಾಗುತ್ತದೆ. ರಕ್ತ ದಾನಿಗಳಿಂದ ಸುಮಾರು 350 ಮಿ.ಲಿ. ರಕ್ತವನ್ನು ಸಂಗ್ರಹಿಸಲಾಗುತ್ತಿದ್ದು, ಅದನ್ನು ಪ್ಲಾಸ್ಮಾ, ಪ್ಲೇಟ್ಲೆಟ್ಸ್ ಹಾಗೂ ರೆಡ್ ಬ್ಲಡ್ ಸೆಲ್ಸ್‌ಗಳಾಗಿ ವಿಭಜಿಸಿ ಅನೇಕ ರೋಗಿಗಳಿಗೆ ಉಪಯೋಗಿಸಲಾಗುತ್ತದೆ ಎಂದು ಹೇಳಿದರು.

ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿ ಹೆಮ್ಮಿಗೆ ಮೋಹನ್ ಅವರು ಮಾತನಾಡಿ, ಆಸ್ಟ್ರಿಯಾ ದೇಶದ ವಿಜ್ಞಾನಿ ಕಾರ್ಲ್ ಲ್ಯಾಂಡ್‌ಸ್ಟೈನರ್ ಅವರು ರಕ್ತದ ಗುಂಪುಗಳ ವೈಜ್ಞಾನಿಕ ವರ್ಗೀಕರಣವನ್ನು ಕಂಡುಹಿಡಿದ ಮಹತ್ವವನ್ನು ವಿವರಿಸಿದರು. ಜೊತೆಗೆ ಆಸ್ಟ್ರೇಲಿಯಾ ದೇಶದ ಜೇಮ್ಸ್ ಹ್ಯಾರಿಸನ್ ಅವರು ತಮ್ಮ ಜೀವಿತಾವಧಿಯಲ್ಲಿ ಸುಮಾರು 1173 ಬಾರಿ ರಕ್ತದಾನ ಮಾಡಿ ವಿಶ್ವದಲ್ಲೇ ಅತಿ ಹೆಚ್ಚು ರಕ್ತದಾನ ಮಾಡಿದ ವ್ಯಕ್ತಿಯಾಗಿ ದಾಖಲೆ ಬರೆದಿದ್ದಾರೆ ಎಂದು ತಿಳಿಸಿ, ಯುವಜನರಲ್ಲಿ ರಕ್ತದಾನದ ಬಗ್ಗೆ ಪ್ರೇರಣೆಯನ್ನು ಮೂಡಿಸಿದರು.

ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕ ಉದಯ್‌ಕುಮಾರ್ ಅವರು ಮಾತನಾಡಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಹಾಸನ ಜಿಲ್ಲಾ ಶಾಖೆಯು ಅನೇಕ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ಕಳೆದ ಎರಡು ವರ್ಷಗಳಿಂದ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಉಚಿತ ಆರೋಗ್ಯ ತಪಾಸಣೆ ಶಿಬಿರಗಳನ್ನು ವೈದ್ಯ ತಜ್ಞರ ಮೂಲಕ ನಿರಂತರವಾಗಿ ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ರಾಜರತ್ನಂ ಪಿ ಅವರು ವಹಿಸಿದ್ದರು. ಅವರು ಮಾತನಾಡಿ ಸ್ವಯಂ ಪ್ರೇರಿತ ರಕ್ತದಾನವು ಅತ್ಯುತ್ತಮ ಮಾನವೀಯ ಸೇವೆಯಾಗಿದ್ದು, ಇಂತಹ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಸೇವಾ ಭಾವ, ಜವಾಬ್ದಾರಿ ಮತ್ತು ಶಿಸ್ತು ಬೆಳೆಸಲು ಸಹಕಾರಿಯಾಗುತ್ತವೆ ಎಂದು ತಿಳಿಸಿದರು.

ಶಿಬಿರದಲ್ಲಿ ರಕ್ತದಾನ ಮಾಡಿದ ಎಲ್ಲಾ ರಕ್ತದಾನಿಗಳಿಗೆ ಪ್ರೇರಣೆಗಾಗಿ ರೆಡ್ ಕ್ರಾಸ್ ಸಂಸ್ಥೆ ವತಿಯಿಂದ ಕೀ-ಚೈನ್‌ಗಳನ್ನು ನೀಡಲಾಯಿತು.

ಈ ಶಿಬಿರದಲ್ಲಿ ಒಟ್ಟು 50 ವಿದ್ಯಾರ್ಥಿಗಳು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡುವ ಮೂಲಕ ಸಮಾಜಕ್ಕೆ ಮಾನವೀಯ ಸೇವೆಯ ಆದರ್ಶವನ್ನು ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ಅಮ್ಜದ್ ಖಾನ್, ಗಿರೀಶ್, ಶಬ್ಬೀರ್ ಅಹ್ಮದ್, ಕಾಲೇಜಿನ ಉಪ ಪ್ರಾಂಶುಪಾಲರಾದ ರಾಜಲಕ್ಷ್ಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



# ಪುನೀತ್ ಕೆರೆಹಳ್ಳಿ ಮೇಲಿನ ಪ್ರಕರಣ ಹಿಂಪಡೆಯಿರಿ

• ಪ್ರಜೋದಯ ವರದಿ

**ಆಲೂರು:** ಅಕ್ರಮಿತ ಬಾಂಗ್ಲಾದೇಶಿಗರ ವಿರುದ್ಧ ಧ್ವನಿಯೆತ್ತಿರುವ ಹಿಂದೂ ಸಂಘಟನೆ ಮುಖಂಡ ಪುನೀತ್ ಕೆರಹಳ್ಳಿ ಅವರ ಮೇಲೆ ಹಾಕಿರುವ ಪ್ರಕರಣ ವಾಪಸ್ ಪಡೆಯುವಂತೆ ತಾಲ್ಲೂಕು ಹಿಂದೂ ಸಂಘಟನೆ ಮುಖಂಡರು ಆಕ್ರೋಶ ವ್ಯಕ್ತಪಡಿಸಿ, ಉಪ ತಹಸೀಲ್ದಾರ್ ಸುಜಾತ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ತಾಲ್ಲೂಕು ಬಿಜೆಪಿ ಪಕ್ಷದ ನಿಕಟಪೂರ್ವ ಅಧ್ಯಕ್ಷ ಕದಾಳು ಲೋಕೇಶ್ ಹಾಗೂ ನಾಗರಾಜ್ ಹುಲ್ಲಹಳ್ಳಿ ಅವರು ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಜಾರಿಗೆ ಬಂದ ದಿನದಿಂದ ಈವರೆಗೂ ಹಿಂದೂ ಸಂಘಟನೆ ಮುಖಂಡರನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ ಎಂದು ದೂರಿದು.

ಗೋವು ರಕ್ಷಕ ಪುನೀತ್ ಕೆರೆಹಳ್ಳಿ ಯಾವುದೇ ತಪ್ಪು ಮಾಡದಿದ್ದರೂ, ರಾಜ್ಯ ಕಾಂಗ್ರೆಸ್ ಸರ್ಕಾರ ಹಲವು ಪ್ರಕರಣ ಹಾಕುವ ಮೂಲಕ ಅವರ ಬಾಯಿ ಮುಚ್ಚಿಸುವ ಕೆಲಸ ಮಾಡುತ್ತಿದೆ. ಇದರಿಂದ ಹಿಂದೂ ಸಂಘಟನೆ ಜಗ್ಗುವುದಿಲ್ಲ ಸಿದ್ದರಾಮಯ್ಯನವರು ಬೆದರಿಕೆ ತಂತ್ರ ಬಿಟ್ಟು ಪುನೀತ್ ಕೆರೆಹಳ್ಳಿ ಮೇಲೆ ಹಾಕಿರುವ ಎಲ್ಲಾ ಪ್ರಕರಣಗಳನ್ನು ವಾಪಾಸ್ ಪಡೆಯುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಹಿಂದೂ ಸಂಘಟನೆ ಮುಖಂಡರಾದ ಲೋಕೇಶ್ ಕದಾಳು, ನಾಗರಾಜು ಹುಲ್ಲಳ್ಳಿ, ಕಟ್ಟಡ ಕಾರ್ಮಿಕ ಸಂಘದ ತಾಲ್ಲೂಕು ಅಧ್ಯಕ್ಷ ಟಿ.ಆನಂದ್, ರುದ್ರೇಗೌಡ ದೊಡ್ಡಕಣಗಾಲು, ತುಂಗುರಾಜು ಮಡಬಲು, ಜಗದೀಶ್ ದೊಡ್ಡಕಣಗಾಲು, ಅಶೋಕ್ ಬೇಡಚವಳ್ಳಿ, ಲೋಕೇಶ್ ಜೆಸಿಬಿ, ವೆಂಕಟೇಶ್ ಕವಳಿಕೆರೆ, ಕೃಷ್ಣಮೂರ್ತಿ ಕಾರ್ಜುವಳ್ಳಿ ಇನ್ನಿತರ ಮುಖಂಡರು ಇದ್ದರು.



# ಶ್ರೀ ಪಂಚಮುಖಿ ಆಂಜನೇಯಸ್ವಾಮಿ ಪ್ರತಿಷ್ಠಾಪನೆ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ದಾಸನಪುರ ರಂಗನಾಥಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ವಿಶ್ವಮನನಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ಪ್ರತಿಷ್ಠಾಪನೆ ಹಾಗೂ ನೂತನ ದೇವಸ್ಥಾನ ಲೋಕಾರ್ಪಣೆ ಗುರುವಾರ ಅದ್ದೂರಿಯಾಗಿ ಜರುಗಿತು.

ಅರಕಲಗೂಡು ದೊಡ್ಡಮಠಾಧೀಶ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಶ್ರೀ ಬಸವರಾಜೇಂದ್ರ ಸ್ವಾಮೀಜಿ, ಶ್ರೀ ಮಹಾಂತ ಸ್ವಾಮೀಜಿ ಅವರು ದೇವರ ಪ್ರತಿಷ್ಠಾಪನಾ ಪೂಜಾ ಕಾರ್ಯದಲ್ಲಿ ಭಾಗವಹಿಸಿ ಭಕ್ತರಿಗೆ ಆರ್ಶೀವಚನ ನೀಡಿದರು.


ದೇವಾಲಯ ಉದ್ಘಾಟನೆ ಅಂಗನವಾಗಿ ವಿವಿಧ ಪೂಜಾ ವಿಧಾನಗಳು ವಿಧಿವತ್ತಾಗಿ ನಡೆದವು. ಗಂಗಾಪೂಜೆ ಕುಂಭ ಕಳಸದೊಂದಿಗೆ ಮೆರವಣಿಗೆ, ಕಲಶಾಭಿಷೇಕ, ಮಹಾ ಮಂಗಳಾರತಿ, ಮಹಾ ಪೂರ್ಣಾಹುತಿ ನಡೆಯಿತು.

ದಾಸನಪುರ ಸೇರಿದಂತೆ ಸುತ್ತಮುತ್ತಲ ನೂರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ದೇವರ ದರ್ಶನ ಪಡೆದರು. ಎಲ್ಲಾ ಭಕ್ತರಿಗೆ ಪ್ರಸಾದ ವಿತರಣೆ ನಡೆಯಿತು.

ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದ ನಿರ್ಮಾಣ, ಪ್ರತಿಷ್ಠಾಪನೆ ಹಾಗೂ ಇತರೆ ಅಭಿವೃದ್ಧಿಯನ್ನು ವಿಶ್ವ ಮನನಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾಗಿರುವ ಖ್ಯಾತ ವೈದ್ಯ ಡಾ.ವಿಶ್ವನಾಥ್ ಅವರು ಸ್ವಯಂ ಪ್ರೇರಿತವಾಗಿ ನಿರ್ವಹಿಸಿದ್ದಾರೆ. ಈ ಭಗವಂತನ ಪುಣ್ಯಕಾರ್ಯದಲ್ಲಿ ಅವರು ಇಡೀ ಕುಟುಂಬ ಜತೆಯಾಗಿ ನಿಂತು ಸಹಕರಿಸಿದೆ.

ಇವತ್ತಿನ ಆಧುನಿಕ ಕಾಲದಲ್ಲಿ ಲಕ್ಷಾಂತರರೂ ವ್ಯಯ ಮಾಡಿ ಸಮಾಜಕ್ಕೆ ದೇವಾಲಯ ನಿರ್ಮಾಣ ಮಾಡುವ ಪುಣ್ಯ ಕಾರ್ಯವನ್ನು ಮಾಡುವವರು ವಿರಳ ಎನ್ನಬಹುದು.

ಆದರೆ ವೃತ್ತಿಯಲ್ಲಿ ವೈದ್ಯರಾಗಿರುವ ಡಾ.ವಿಶ್ವನಾಥ್ ಅವರು ಸರಕಾರ ಅಥವಾ ಇತರೆ ಯಾವುದೇ ಮೂಲದಿಂದಲೂ ಆರ್ಥಿಕ ನೆರವು ಪಡೆಯದೇ ತಮ್ಮ ಕುಟುಂಬದ ಚಾರಿಟಬಲ್ ಟ್ರಸ್ಟ್ ಮೂಲಕ ಇಂತಹ ಮಹಾನ್ ಕಾರ್ಯವನ್ನು ಒಬ್ಬಂಟಿಯಾಗಿ ನಿರ್ವಹಿಸಿದ್ದಾರೆ. ಹಾಗಾಗಿ ದಾಸನಪುರ ಹಾಗೂ ಸುತ್ತಾಮುತ್ತಲ ಗ್ರಾಮಸ್ಥರು ಡಾ.ವಿಶ್ವನಾಥ್ ದಂಪತಿಯನ್ನು ಸನ್ಮಾನಿಸಿದರು. ಮುಖಂಡರಾದ ಬೆಮ್ಮತ್ತಿ ಸುರೇಶ್, ಮಾಗೋಡು ಬಸವರಾಜು ಸೇರಿದಂತೆ ಇತರರು ಭಾಗವಹಿಸಿದ್ದರು.



# ಯುವ ಪೀಳಿಗೆಯಲ್ಲಿ ದೇಶಪ್ರೇಮ ಜಾಗೃತಗೊಳಿಸುವುದು ಅಗತ್ಯ

• ಪ್ರಜೋದಯ ವರದಿ

ಹಾಸನ: ನನ್ನ ಜೀವನವೇ ನನ್ನ ಸಂದೇಶ ಎನ್ನುತ್ತಿದ್ದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು 1948ರಲ್ಲಿ ಜನವರಿ 30 ರ ಶುಕ್ರವಾರದಂದು ನಾಥೂರಾಮ್ ಗೋಡ್ಸೆಯಿಂದ ಹತ್ಯೆಗೀಡಾದರು. ಅವರ ಪುಣ್ಯತಿಥಿಯ ನೆನಪಿಗಾಗಿ ಈ ದಿನವನ್ನು ಹುತಾತ್ಮರ ದಿನವನ್ನಾಗಿ ಆಚರಿಸಲಾಗುತ್ತದೆ ಎಂದು ಸಮಾಜ- ವಿಜ್ಞಾನ ವಿಷಯ ಶಿಕ್ಷಕ ಚಿದಾನಂದ ಕೆ.ಎನ್. ಅವರು ಹೇಳಿದರು.

ನಗರದ ಆರ್.ಸಿ. ರಸ್ತೆಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರಧಾನ) ಪ್ರೌಢಶಾಲಾ ವಿಭಾಗ ಆರ್. ಸಿ.ರಸ್ತೆ, ಹಾಸನ ಇಲ್ಲಿ ಬೆಳಗಿನ ಪ್ರಾರ್ಥನಾ ಅವಧಿಯ ಸಚೇತನ ಕಾರ್ಯಕ್ರಮದಲ್ಲಿ ಸರ್ವೋದಯ ದಿನದ ನಿಮಿತ್ತ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ದಿನದಂದು ದೇಶದಾದ್ಯಂತ ಶಾಂತಿ ಮತ್ತು ಅಹಿಂಸೆಯ ಸಂದೇಶವನ್ನು ಸಾರಲಾಗುತ್ತದೆ ಎಂದರು.

ಹುತಾತ್ಮರ ಬಲಿದಾನವನ್ನು ನೆನೆಯುವ ಮೂಲಕ ಯುವ ಪೀಳಿಗೆಯಲ್ಲಿ ದೇಶಪ್ರೇಮವನ್ನು ಜಾಗೃತಗೊಳಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ. ಈ ದಿನವನ್ನು ಹುತಾತ್ಮರ ದಿನವೆಂದು, ಸರ್ವೋದಯ ದಿನವೆಂದೂ ಮತ್ತು ಸೌಹಾರ್ದ ಸಂಕಲ್ಪ ದಿನವೆಂದೂ ಆಚರಣೆ ಮಾಡಲಾಗುತ್ತದೆ. ಸ್ವಾತಂತ್ರ್ಯ ಎಂಬುದು ನಮಗೆ ಸುಲಭವಾಗಿ ಬಂದಿದ್ದಲ್ಲ, ಅದರ ಹಿಂದೆ ಸಾವಿರಾರು ಹೋರಾಟಗಾರರ ತ್ಯಾಗವಿದೆ. ಹುತಾತ್ಮರ ದಿನವು ಕೇವಲ ಒಂದು ದಿನದ ಆಚರಣೆಯಾಗದೆ, ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪದ ದಿನವಾಗಬೇಕು ಎಂದರು.

ಹಾಸನ ಜಿಲ್ಲಾ ಸೇವಾದಳ ಸಂಚಾಲಕರಾದ ರಾಣಿ ಅವರು ಮಾತನಾಡಿ, ಮಹಾತ್ಮಾ ಗಾಂಧೀಜಿ ವಿಶ್ವಕ್ಕೆ ಶಾಂತಿ ಧೂತರಾಗಿದ್ದಾರೆ. ಇಂದು ವಿಶ್ವ ಶಾಂತಿ ಇಡೀ ಜಗತ್ತಿಗೆ ಅಗತ್ಯವಾಗಿದೆ. ಮಹಾತ್ಮ ಗಾಂಧೀಜಿಯವರ ಆಶಯದಂತೆ ನಾವೆಲ್ಲರೂ ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ನಮ್ಮ ಸೇವಾದಳದ ಮೂಲಕ ಸಮಾಜ ಸೇವೆ ನಮ್ಮ ಜೀವನದ ಧ್ಯೇಯವಾಗಬೇಕು. ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ ಬೆಳೆಸಬೇಕೆಂದರು.

ಕಾರ್ಯಕ್ರಮದಲ್ಲಿ ಸಂಗೀತ ಶಿಕ್ಷಕರಾದ ಬಿ.ಎನ್.ಎಸ್. ಮುರಳಿ ಅವರು ಶಾಂತಿಮಂತ್ರಗಳನ್ನು ಮಕ್ಕಳಿಗೆ ಹೇಳಿಕೊಟ್ಟರು. ಶಾಲೆಯ ಶಿಕ್ಷಕರಾದ ಹೆಚ್.ಪಿ.ಮಂಜುಳ, ಎ.ವಿ.ಗೀತಾರಾಣಿ, ರುದ್ರೇಶ್, ಎಂ.ಆರ್.ರಂಗಾಮಣಿ, ಎಸ್.ಕೆ.ಪೂರ್ಣಿಮಾ, ಪಿ. ಮಧು, ತೈಬಾ ಕೌಸರ್, ಚಿದಾನಂದ ಹಾಗೂ ಎಲ್ಲಾ ವಿದ್ಯಾರ್ಥಿಗಳು ಹಾಜರಿದ್ದರು.



## ಭಾರತೀಯ ಸಂಸ್ಕೃತಿ- ಧರ್ಮವನ್ನು ಉಳಿಸುವುದು ನಮ್ಮೆಲ್ಲರ ಜವಾಬ್ದಾರಿ

# ಪರಮಾತ್ಮನಲ್ಲಿ ಆತ್ಮ ವಿಲೀನಗೊಳಿಸುವ ಸಾಧನವೇ ದೇಹ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಗೆಂಡೇಹಳ್ಳಿ ಹೋಬಳಿಯ ಶನಿವಾರಪೇಟೆ ಗ್ರಾಮದಲ್ಲಿರುವ ಪುರಾತನ ಶ್ರೀ ರುದ್ರೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀ ರುದ್ರೇಶ್ವರಸ್ವಾಮಿಯವರ ನೂತನ ವಿಗ್ರಹ ಪುನರ್‌ಪ್ರತಿಷ್ಠಾಪನೆ ಹಾಗೂ ಗೋಪುರ ಶಿಖರ ಕಳಶಾರೋಹಣ ಪ್ರತಿಷ್ಠಾಪನಾ ಕಾರ್ಯಕ್ರಮವು ಶ್ರದ್ಧಾ ಭಕ್ತಿಯಿಂದ ನೆರವೇರಿತು.

ಕಾರ್ಯಕ್ರಮದ ಅಂಗವಾಗಿ ವಿವಿಧ ಧಾರ್ಮಿಕ ವಿಧಿವಿಧಾನಗಳು, ಹೋಮಹವನಗಳು ಹಾಗೂ ವಿಶೇಷ ಪೂಜಾ ಕೈಂಕರ್ಯಗಳು ವಿಜೃಂಭಣೆಯಿಂದ ನಡೆಯಿತು. ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಯಸಳೂರಿನ ತೆಂಕಲಗೂಡು ಬೃಹನ್ಮಠದ ಶ್ರೀ ಶ್ರೀ ಶ್ರೀ ಷ.ಬ್ರ. ಚನ್ನಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ ಮಾತನಾಡಿ, ಈ ದೇಹವು ಆತ್ಮೋನ್ನತಿಗಾಗಿ ನಮಗೆ ದೊರೆತ ಮಹತ್ತರ ಅವಕಾಶ. ಆತ್ಮವನ್ನು ಪರಮಾತ್ಮನಲ್ಲಿ ವಿಲೀನಗೊಳಿಸುವ ಸಾಧನವೇ ಮಾನವ ದೇಹ. ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ದೇವರು ನಮಗೆ ಅಮೂಲ್ಯವಾದ ದೇಹವನ್ನು ಕೊಟ್ಟಿದ್ದಾನೆ. ಭೌತಿಕ ಸುಖಗಳ ಹಿಂದೆ ಮಾತ್ರ ಓಡದೆ, ಭಕ್ತಿಯಿಂದ ಪರಮಾತ್ಮನ ಧ್ಯಾನ ಮಾಡುವ ಮೂಲಕ ಜೀವನವನ್ನು ಸಾರ್ಥಕಗೊಳಿಸಬೇಕು. ಭಾರತ ವಿಶ್ವಕ್ಕೆ ಗುರು ಸ್ಥಾನವನ್ನು ನೀಡಿದ ಏಕೈಕ ದೇಶ. ನಮ್ಮ ಸಂಸ್ಕೃತಿ ಮತ್ತು ಧರ್ಮವನ್ನು ಉಳಿಸುವ ಹೊಣೆ ನಮ್ಮ ಮೇಲಿದೆ ಅವರು ಎಂದು ಹೇಳಿದರು.

ಪುಷ್ಪಗಿರಿ ಶ್ರೀ ಸೋಮಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ಮಾತನಾಡಿ, ದೇವಾಲಯಗಳು ಕೇವಲ ಪೂಜಾ ಕೇಂದ್ರಗಳಲ್ಲ, ಅವು ಸಂಸ್ಕಾರ, ಸಂಸ್ಕೃತಿ ಮತ್ತು ಸಾಮಾಜಿಕ ಏಕತೆಯ ಕೇಂದ್ರಗಳಾಗಿವೆ. ನೂತನ ವಿಗ್ರಹ ಪುನರ್‌ಪ್ರತಿಷ್ಠಾಪನೆ ಹಾಗೂ ಗೋಪುರ ಶಿಖರ ಕಳಶಾರೋಹಣದಂತಹ ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಧರ್ಮಬೋಧನೆ ಹಾಗೂ ಆಧ್ಯಾತ್ಮಿಕ ಚೇತನೆಯನ್ನು ಹೆಚ್ಚಿಸುತ್ತವೆ. ಇಂತಹ ಕಾರ್ಯಕ್ರಮಗಳ ಮೂಲಕ ಯುವ ಪೀಳಿಗೆಯಲ್ಲಿ ಧರ್ಮ, ಶ್ರದ್ಧೆ ಮತ್ತು ಸಂಪ್ರದಾಯಗಳ ಅರಿವು ಮೂಡಬೇಕು. ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಧರ್ಮ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಸಮಾಜ ಸುಸಂಸ್ಕೃತವಾಗುತ್ತದೆ ಎಂದು ಅವರು ತಿಳಿಸಿದರು.

ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಬಿ.ಶಿವರಾಜು ಅವರು ಮಾತನಾಡಿ, ಭಕ್ತರಾಗುವುದು ಸುಲಭವಾದರೂ, ಧಾರ್ಮಿಕವಾಗಿ ಬದುಕುವುದು ಕಷ್ಟ. ನಾವು ಧಾರ್ಮಿಕತೆಯನ್ನು ಮರೆಯುತ್ತಿರುವುದು ಆತಂಕಕಾರಿ. ನಮ್ಮ ಸಂಸ್ಕೃತಿ ಹಾಗೂ ಧರ್ಮವನ್ನು ಕಾಪಾಡಿಕೊಳ್ಳಲು ಎಲ್ಲರೂ ಒಗ್ಗಟ್ಟಾಗಿ ಕಾರ್ಯ ನಿರ್ವಹಿಸಬೇಕು. ಆಗ ಮಾತ್ರ ನಮ್ಮ ಭಾರತ ವಿಶ್ವಗುರುವಾಗಲು ಸಾಧ್ಯವಾಗುತ್ತದೆ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಕೆ.ಎಸ್.ಲಿಂಗೇಶ್, ಮಾಜಿ ಸಚಿವ ಬಿ.ಶಿವರಾಂ, ಗ್ರಾನೈಟ್ ರಾಜಶೇಖರ್, ಚಂದ್ರಪ್ಪ ಶೆಟ್ಟರು, ಗ್ರಾಮ ಪಂಚಾಯತ್ ಅಧ್ಯಕ್ಷೆ ಮೀನಾಕ್ಷಿ ಶಂಕರಾಚಾರ್, ಪಿ.ಎಲ್.ಡಿ ಬ್ಯಾಂಕ್ ನಿರ್ದೇಶಕ ಮಗ್ಗಪ್ಪಗೌಡ, ಕಲ್ಲಪ್ಪ ಶೆಟ್ಟರು, ಚೇತನ್ (ಗೆಂಡೇಹಳ್ಳಿ), ಗಿರೀಶ್, ಶೋಭಾ ಗಣೇಶ್, ಗ್ರಾಮದ ಹಿರಿಯರು ಹಾಗೂ ಅಪಾರ ಸಂಖ್ಯೆಯ ಭಕ್ತಾಧಿಗಳು ಉಪಸ್ಥಿತರಿದ್ದರು.

ದೇವಸ್ಥಾನದ ಅಭಿವೃದ್ಧಿ ಹಾಗೂ ಧಾರ್ಮಿಕ ಸಂಪ್ರದಾಯಗಳ ಉಳಿವಿಗೆ ಈ ರೀತಿಯ ಕಾರ್ಯಕ್ರಮಗಳು ಅತ್ಯಂತ ಮಹತ್ವದ್ದೆಂದು ದೇವಸ್ಥಾನ ಸಮಿತಿಯವರು ತಿಳಿಸಿದರು.



# ಸರ್ಕಾರಿ ಶಾಲೆಗಳ ಅಭಿವೃದ್ಧಿಯೇ ದೇಶದ ಪ್ರಗತಿ

## ಸಮುದಾಯ ಕೈಜೋಡಿಸಿದಾಗ ಗುಣಾತ್ಮಕ ಶಿಕ್ಷಣ ದೊರೆಯಲು ಸಾಧ್ಯ

• ಪ್ರಜೋದಯ ವರದಿ

**ಹಾಸನ:** ಸರ್ಕಾರಿ ಶಾಲೆಗಳು ಅಭಿವೃದ್ಧಿಯಾದಾಗ ಮಾತ್ರ ದೇಶದ ಪ್ರಗತಿ ಸಾಧ್ಯ. ಕೇವಲ ಸರ್ಕಾರಿ ಸೌಲಭ್ಯಗಳಿಂದ ಒಂದು ಶಾಲೆಯ ಭೌತಿಕ ಹಾಗೂ ಬೌದ್ಧಿಕ ಬೆಳವಣಿಗೆ ಸಾಧ್ಯವಿಲ್ಲ, ಸಮುದಾಯವೂ ಕೈಜೋಡಿಸಿದಾಗ ಗುಣಾತ್ಮಕ ಶಿಕ್ಷಣ ದೊರೆಯಲು ಸಾಧ್ಯ ಎಂದು ಆಲೂರು ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಿ.ಎಂ. ವರದರಾಜು ಅವರು ಅಭಿಪ್ರಾಯಪಟ್ಟರು.

ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚೌಡುವಳ್ಳಿಯಲ್ಲಿ ಹಮ್ಮಿಕೊಂಡಿದ್ದ ಕಲಿಕಾ ಸಾಮಾಗ್ರಿಗಳ ವಿತರಣಾ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಈಗಾಗಲೇ ಸರ್ಕಾರ ಎಲ್ಲಾ ಮಕ್ಕಳಿಗೂ ಸಮವಸ್ತ್ರ, ಕ್ಷೀರ, ಬಿಸಿಯೂಟ, ಪಠ್ಯಪುಸ್ತಕ, ವಿದ್ಯಾರ್ಥಿ ವೇತನ, ಶೂ ಸಾಕ್ಸ್ ಮುಂತಾದ ಮಹತ್ತರ ಯೋಜನೆಗಳನ್ನು ಜಾರಿಗೆ ತಂದಿದೆ. ಇದರ ಜೊತೆಗೆ ಮಕ್ಕಳ ಕಲಿಕೆಗೆ ಅಗತ್ಯವಿರುವ ನೋಟ್ಸ್, ಲೇಖನ ಸಾಮಾಗ್ರಿಗಳನ್ನು ಸಾಮಾಜಿಕ ಕಾಳಜಿಯುಳ್ಳವರು ಸರ್ಕಾರಿ ಶಾಲಾ ಮಕ್ಕಳಿಗೆ ದೇಣಿಗೆಯಾಗಿ ನೀಡುವುದರಿಂದ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದರು.

ಶಾಲಾ ಮುಖ್ಯ ಶಿಕ್ಷಕ ಶಂಕರಾಚಾರ್ ಅವರು ಮಾತನಾಡಿ, ನಮ್ಮ ಶಾಲೆಯ ಎಲ್ಲಾ ಮಕ್ಕಳಿಗೂ ಉಚಿತವಾಗಿ ನೋಟ್ ಬುಕ್ಸ್, ಪೆನ್, ಪೆನ್ಸಿಲ್, ಶಾರ್ಪನರ್, ಎರೇಸರ್ ಮುಂತಾದ ಪರಿಕರಗಳನ್ನು ಶಿಕ್ಷಕರೂ, ಶಾಲಾ ಹಿತೈಷಿಗಳೂ ಹಾಗೂ ಆಲೂರು ತಾಲ್ಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ಡಿ.ಎಂ.ವರದರಾಜುರವರ ಕೊಡುಗೆ ಅನನ್ಯವಾದುದು ಎಂದು ಸ್ಮರಿಸಿಕೊಂಡರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರಾದ ಜೆ.ಸಿ. ಚಂದ್ರಕಲಾ, ಆರ್. ಎನ್.ಸರೋಜ, ಅಂಗನವಾಡಿ ಕಾರ್ಯಕರ್ತೆ ಲೋಲಾಕ್ಷಿ ಸೇರಿದಂತೆ ಶಾಲಾ ಮಕ್ಕಳು ಹಾಜರಿದ್ದರು.



## ಉದ್ಯಮಿ ಸಿ.ಜೆ.ರಾಯ್ ಆತ್ಮಹತ್ಯೆಗೆ ಶರಣು

• ಪ್ರಜೋದಯ ವರದಿ



**ಬೆಂಗಳೂರು:** ರಿಯಲ್ ಎಸ್ಟೇಟ್ ಉದ್ಯಮಿ, ಕಾನ್ಫಿಡೆಂಟ್ ಗ್ರೂಪ್ ಚೇರ್ಮನ್ ಸಿ.ಜೆ. ರಾಯ್ ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ನಗರದ ಹೊಸೂರು ರಸ್ತೆಯ ಲ್ಯಾಂಗ್‌ಫೋರ್ಡ್ ಟೌನ್‌ನಲ್ಲಿರುವ ಕಚೇರಿಯಲ್ಲಿ ಘಟನೆ ನಡೆದಿದೆ. ಪದೇ ಪದೆ ಐಟಿ ದಾಳಿಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಶುಕ್ರವಾರ ಕೂಡ ಇಲಾಖೆ ಅಧಿಕಾರಿಗಳು ದಾಳಿ ಮಾಡಿದ್ದರು. ಈ ವೇಳೆಯೇ ಪಿಸ್ತೂಲ್‌ನಿಂದ ಶೂಟ್ ಮಾಡಿಕೊಂಡಿದ್ದಾರೆ.

ಮಧ್ಯಾಹ್ನ ಕಚೇರಿಗೆ ಬಂದಿದ್ದ ಉದ್ಯಮಿ ಸಿ.ಜೆ.ರಾಯ್, ಒಂದು ಗಂಟೆ ಐಟಿ ವಿಚಾರಣೆ ಎದುರಿಸಿದ್ದಾರೆ. ಅಧಿಕಾರಿಗಳಿಗೆ ಕೆಲ ದಾಖಲೆ ಸಹ ಕೊಟ್ಟಿದ್ದಾರೆ. ಮತ್ತಷ್ಟು ದಾಖಲೆ ತರಲು ಕೋಣೆಗೆ ಹೋಗಿದ್ದು, ಈ ವೇಳೆ ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡಿದ್ದಾರೆ. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಸಿ.ಜೆ. ರಾಯ್ ಕೊನೆಯುಸಿರೆಳೆದಿದ್ದಾರೆ.

ಕೇರಳ ಮೂಲದ ಸಿ.ಜೆ. ರಾಯ್, 1997ರಲ್ಲಿ ಹೆಚ್‌ಪಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಬಳಿಕ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದರು. ಕಾನ್ಫಿಡೆಂಟ್ ಗ್ರೂಪ್ ಸಾಮ್ರಾಜ್ಯ ಕಟ್ಟಿದ್ದರು.

# ಆಟಕ್ಕುಂಟು ಲೆಕ್ಕಕ್ಕಿಲ್ಲದ ಬಿಜೆಪಿ ಸಂಸದರು: ಡಿ.ಕೆ.ಶಿ.

## ರಾಜ್ಯದ ಪರ ಮಾತನಾಡಲ್ಲ | ಬಿಜೆಪಿ ಭ್ರಷ್ಟಾಚಾರ ಬಯಲಿಗೆಳೆಯುತ್ತೇವೆ

• ಪ್ರಜೋದಯ ವರದಿ

**ಬೆಂಗಳೂರು:** ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಯಾವಾಗಲೂ ಮಲತಾಯಿ ಧೋರಣೆ ಮಾಡಲಾಗುತ್ತಿದೆ. ಅದರ ಬಗ್ಗೆ ಬಿಜೆಪಿ ಸಂಸದರು, ಕೇಂದ್ರ ಸಚಿವರು ಯಾರೂ ಚಕಾರ ಎತ್ತಿಲ್ಲ. ಅವರು ಆಟಕ್ಕುಂಟು ಲೆಕ್ಕಕ್ಕೆ ಇಲ್ಲ ಎನ್ನುವಂತೆ ಕೆಲಸ ಮಾಡುತ್ತಿದ್ದಾರೆಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವ್ಯಂಗ್ಯವಾಡಿದರು.

ಶಿವಮೊಗ್ಗಾದಲ್ಲಿ ಶುಕ್ರವಾರ ಮಾತನಾಡಿದ ಅವರು, ಕೇಂದ್ರ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಳ್ಳುವುದಿಲ್ಲ, ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ಕೊಡುವುದಾಗಿ ಹೇಳಿ ಬಿಡಿಗಾಸು ನೀಡಿಲ್ಲವೆಂದರು.

ಬಿಜೆಪಿ ಸರ್ಕಾರದಲ್ಲಿ ಆಗಿರುವ ಹಗರಣಗಳನ್ನು ನಾವು ಬಯಲಿಗೆಳೆದಿದ್ದೇವೆ. ಕೋವಿಡ್ ಸಮಯದಲ್ಲಿ ವಿಪರೀತ ಭ್ರಷ್ಟಾಚಾರ ನಡೆದಿದೆ. ನಾವು ಅದನ್ನೆಲ್ಲಾ ಬಯಲಿಗೆ ತರುತ್ತೇವೆ. ಅಬಕಾರಿ ಸಚಿವರ ವಿರುದ್ಧ ನಿರಾಧಾರ ಆರೋಪ ಮಾಡುತ್ತಿದ್ದಾರೆ. ರಾಜಕೀಯ ಕಾರಣಕ್ಕಾಗಿ ಬಿಜೆಪಿಯವರು ಮಾತನಾಡುತ್ತಾರೆ. ಅಬಕಾರಿ ಹಗರಣ ಸಂಬಂಧ ಸಮಗ್ರ ತನಿಖೆಯಾಗಲಿ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸದನದಲ್ಲಿ ಮನರೇಗಾ ವಿಚಾರವಾಗಿ ಪ್ರಸ್ತಾಪ ಮಾಡಿದ್ದು, ಅದನ್ನು ಕಾರ್ಯಕಲಾಪ ಸಲಹಾ ಸಮಿತಿ ಮುಂದಿಟ್ಟು ತೀರ್ಮಾನ ಮಾಡಬೇಕೆಂದು ಸಭಾಧ್ಯಕ್ಷರು ತಿಳಿಸಿದ್ದರು. ಅದರಂತೆ ಚರ್ಚೆಯಾಗಿದೆ. ವಿಬಿ ಜಿ ಗ್ರಾಮ್ ಜಿ ಕಾಯ್ದೆಯನ್ನು ಏಕೆ ರದ್ದು ಮಾಡಬೇಕು ಎಂದು



ನಾವು ತಿಳಿಸುತ್ತೇವೆ. ಈಗಿರುವ ಪರಿಸ್ಥಿತಿಯಲ್ಲಿ ಯಾವ ರಾಜ್ಯದಲ್ಲಿಯೂ ಹೊಸ ಕಾಯ್ದೆ ಜಾರಿಗೆ ತರಲು ಸಾಧ್ಯವಿಲ್ಲ. ಈಗ ನಾಲ್ಕೈದು ತಿಂಗಳು ವ್ಯವಸಾಯದ ಕಾಲ. ಈ ಸಮಯದಲ್ಲಿ ರೈತರು ಅವರವರ ಕೂಲಿಯನ್ನು ಅವರು ಪಡೆದುಕೊಳ್ಳುತ್ತಿದ್ದರು. ಇಂತಹ ಸಮಯದಲ್ಲಿಯೇ ನರೇಗಾ ಯೋಜನೆ ತೆಗೆದು ಹಾಕಿದರೆ ಯಾರಿಗೂ ಏನೂ ಅನುಕೂಲವಾಗುವುದಿಲ್ಲವೆಂದರು. ಕೇಂದ್ರ ಸರ್ಕಾರ ಮಾನವ ದಿನಗಳನ್ನು 125 ದಿನಗಳಿಗೆ ಹೆಚ್ಚಳ ಮಾಡಿದ್ದೇವೆ ಎಂದು ಹೇಳಬಹುದು. ಆದರೆ ಬೇರೆ ಸಮಯದಲ್ಲಿ ಇಷ್ಟು ದಿನಗಳ ಕಾಲ ಕೆಲಸ ನೀಡಲು ಸಾಧ್ಯವಿಲ್ಲ. ಒಂದೊಂದು ಪಂಚಾಯತಿಗೆ ತಲಾ 1ರಿಂದ 1.5 ಕೋಟಿ ರೂ. ಅನುದಾನ ನಷ್ಟವಾಗುತ್ತಿದೆ. ಜಾಬ್ ಕಾರ್ಡ್ ಹೊಂದಿರುವವರಿಗೂ ನಷ್ಟವಾಗುತ್ತದೆಂದರು.

**ಡಿ.ಕೆ.ಶಿ. ಸಿಎಂ ಆಗುವುದು ಬೇಡ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಮುಖ್ಯಮಂತ್ರಿಯಾಗಿರಲಿ ಎಂದು ಗಂಗಾವತಿ ಶಾಸಕ ಜನಾರ್ಧನ ರೆಡ್ಡಿ ಅವರು ಮನವಿ ಮಾಡಿದರು.

ವಿಧಾನಸಭೆಯಲ್ಲಿ ಮಾತನಾಡಿದ ಅವರು, ಯಾವ ಕಾರಣಕ್ಕೂ ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಆಗದಂತೆ ನೋಡಿಕೊಳ್ಳಿ. ಮುಖ್ಯಮಂತ್ರಿಯಾಗಿ ಎರಡೂವರೆ ವರ್ಷ ಪೂರೈಸಿದ್ದೀರಿ. ಪೂರ್ಣಾವಧಿಗೆ ನೀವೇ ಮುಂದುವರಿಯಬೇಕು ಎನ್ನುವುದು ನನ್ನ ಕೋರಿಕೆ ಎಂದರು.

ನಮ್ಮ ಮತ್ತು ಸಿದ್ದರಾಮಯ್ಯನವರ ರಾಜಕೀಯ ಕಾದಾಟಗಳು ಏನೇ ಇರಲಿ, ಅದು ಈಗ ಇತಿಹಾಸ. ನಮ್ಮ ಕರ್ಮವನ್ನು ನಾವು ಅನುಭವಿಸಲೇಬೇಕು. ಬಳ್ಳಾರಿಯಲ್ಲಿ ನಡೆದ ಘಟನೆಗೆ ಡಿ.ಕೆ.ಶಿವಕುಮಾರ್ ಬೇರೆ ಅರ್ಥ ಕಲ್ಪಿಸಿದರು. ನನ್ನ ಮನೆಯ ಕಂಪೌಂಡ್‌ಗೆ ಬ್ಯಾನರ್ ಹಾಕಲಾಗಿತ್ತು. ನಾನು ಅದನ್ನು ತೆಗೆಯಲಿಲ್ಲ, ಬದಲಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೆ. ಬಳ್ಳಾರಿಯಲ್ಲಿ ಆಗಿರುವುದು ಗುಪ್ತಚರದ ವೈಫಲ್ಯ, ಬಳ್ಳಾರಿ ಶಾಸಕರು ಮತ್ತು ಅವರ ಹಿಂಬಾಲಕರು ಪೂರ್ವನಿಯೋಜಿತ ಯೋಜನೆ ಮಾಡಿ ನನ್ನ ಮನೆ ಮೇಲೆ ದಾಳಿ ಮಾಡಿಸಿದರು. ಸತ್ಯ ಹೀಗಿದ್ದರೂ ಶಿವಕುಮಾರ್ ಅಲ್ಲಿಗೆ ಬಂದು ರೌಡಿ ಶಾಸಕರ ಬೆಂಬಲಕ್ಕೆ ನಿಂತರು. ಯಾವ ಕಾರಣಕ್ಕೂ ಅವರು ಮುಖ್ಯಮಂತ್ರಿ ಆಗಬಾರದೆಂದರು.

## ವಿಧಾನ ಪರಿಷತ್‌ನಲ್ಲಿ ಭರಪೂರ ವಾದ-ಪ್ರತಿವಾದ

» **ಮೊದಲನೇ ಪುಟದಿಂದ**

ಎಂದು ಪ್ರಸ್ತಾಪಿಸಲಾಗಿತ್ತು. ಆಗಿನ ರಾಷ್ಟ್ರಪತಿ ಕೆ.ಆರ್.ನಾರಾಯಣ್ ಅವರು, ಸಂವಿಧಾನವು ವಿಫಲವಾಗಿದೆಯೇ ಅಥವಾ ನಾವು ಅದನ್ನು ವಿಫಲಗೊಳಿಸುತ್ತಿದ್ದೇವೆಯೇ ಎಂದು ಆಕ್ಷೇಪ ಎತ್ತಿದ್ದರು. ಹೀಗಿದ್ದೂ ಸಂಸತ್ತಿನ ಜಂಟಿ ಅಧಿವೇಶನದಲ್ಲಿ ಸರ್ಕಾರದ ಭಾಷಣ ವನ್ನು ಪೂರ್ತಿ ಓದಿದ್ದರು. ರಾಜ್ಯಪಾಲರೂ ಹೀಗೇ ಮಾಡಬಹುದಿತ್ತು. ಅದರಿಂದ ರಾಷ್ಟ್ರಪತಿ ಅವರಿಗೆ ಅವಮಾನವೇನೂ ಆಗುತ್ತಿರಲಿಲ್ಲ ಎಂದು ಪಟ್ಟು ಹಾಕಿದರು.

ಛಲವಾದಿ ನಾರಾಯಣಸ್ವಾಮಿ ಅವರು ಹೇಳಿದಂತೆ ನುಂಗಪ್ಪಗಳ ಕತೆ ನಿಜವೇ ಆಗಿದ್ದರೆ ನರೇಗಾ ಅಡಿ ಕೋಟ್ಯಾಂತರ ಆಸ್ತಿಗಳ ಸೃಜನೆ ಆಗುತ್ತಿರಲಿಲ್ಲ. ನರೇಗಾದಿಂದ ಏನೆಲ್ಲಾ ಅನುಕೂಲವಾಗಿದೆ ಎಂಬುದರ ಬಗ್ಗೆ ಒಂದು ಪವರ್ ಪಾಯಿಂಟ್ ಪ್ರೆಸೆಂಟೇಷನ್ ನೀಡಲಿದ್ದೇನೆ. ದಯವಿಟ್ಟು ಬನ್ನಿ. ಪತ್ರಿಕೆ ನಡೆಸುವುದು ಸುಲಭವಲ್ಲ. ಹಲವು ರಾಜಕಾರಣಿಗಳು ಪತ್ರಿಕೆ ಆರಂಭಿಸಿ ಬಾಗಿಲು ಹಾಕಿಕೊಂಡು ಹೋಗಿದ್ದಾರೆ. ಜಾಹೀರಾತುಗಳು ಇಲ್ಲದೆ ಪತ್ರಿಕೆಗಳು ಹೇಗೆ ನಡೆಯಬೇಕು. ಇಂತಹ ಜಾಹೀರಾತುಗಳು ಇನ್ನಷ್ಟು ಬರಬೇಕೆಂದು ಸರ್ಕಾರದ ನಡೆಯನ್ನು ಸಮರ್ಥಿಸಿಕೊಂಡರು.

## ಪದ್ಮನಾಭಸ್ವಾಮಿ ದೇಗುಲಕ್ಕೆ ಟೀಂ ಇಂಡಿಯಾ ಭೇಟಿ

• ಪ್ರಜೋದಯ ವರದಿ

**ತಿರುವನಂತಪುರ:** ನ್ಯೂಜಿಲೆಂಡ್ ವಿರುದ್ಧದ ಐದು ಪಂದ್ಯಗಳ ಟಿ-20 ಕ್ರಿಕೆಟ್ ಸರಣಿಯ ಕೊನೆಯ ಪಂದ್ಯಕ್ಕೂ ಮುನ್ನ ಭಾರತ ತಂಡದ ಆಟಗಾರರು ಶ್ರೀ ಪದ್ಮನಾಭಸ್ವಾಮಿ ದೇಗುಲಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಅಂತಿಮ ಪಂದ್ಯವು ಇಲ್ಲಿನ ಗ್ರೀನ್ ಫೀಲ್ಡ್ ಅಂತರ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿದೆ.

ಟಿ-20 ನಾಯಕ ಸೂರ್ಯ ಕುಮಾರ್ ಯಾದವ್, ಆಲ್‌ರೌಂಡರ್ ಅಕ್ಷರ್ ಪಟೇಲ್, ಬ್ಯಾಟರ್ ರಿಂಕು ಸಿಂಗ್, ವರುಣ್ ಚಕ್ರವರ್ತಿ, ಸ್ಪಿನ್ ಬೌಲರ್ ಕುಲದೀಪ್ ಯಾದವ್ ಮತ್ತು ರವಿ ಬಿಷ್ಣೋಯಿ, ಫೀಲ್ಡಿಂಗ್ ಕೋಚ್ ಟಿ.ದಿಲೀಪ್ ಶುಕ್ರವಾರ ಬೆಳಿಗ್ಗೆ ದೇಗುಲಕ್ಕೆ ಭೇಟಿ ನೀಡಿದ್ದರು. ಈ ವೇಳೆ ಎಲ್ಲರೂ ಪಂಚೆ, ಶಲ್ಯ ತೊಟ್ಟು ಸಾಂಪ್ರದಾಯಿಕ ಉಡುಗೆಯಲ್ಲಿ ಕಾಣಿಸಿ ಕೊಂಡಿದ್ದು



ವಿಶೇಷವಾಗಿತ್ತು.

ದೇವಾಲಯದ ಆವರಣದಲ್ಲಿ ಆಟಗಾರರು 30 ನಿಮಿಷಗಳಿಗೂ ಹೆಚ್ಚು ಕಾಲ ಸಮಯ ಕಳೆದಿದ್ದಾರೆ. ಶನಿವಾರ ಸಂಜೆ 7ಕ್ಕೆ ಟೀಂ ಇಂಡಿಯಾ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. ಭಾರತ ಈಗಾಗಲೇ 3-1 ರಿಂದ ಸರಣಿ ಗೆದ್ದಿದೆ. ಈ ಪಂದ್ಯ ಭಾರತಕ್ಕೆ ಔಪಚಾರಿಕವಾಗಿದ್ದು, ನ್ಯೂಜಿಲೆಂಡ್‌ಗೆ ಇನ್ನೂ ಒಂದು ಪಂದ್ಯ ಗೆದ್ದು ಸರಣಿ ಸೋಲಿನ ಅಂತರವನ್ನು ಕಡಿಮೆ ಮಾಡಿಕೊಳ್ಳುವ ಅವಕಾಶವಿದೆ.

## ಮಾರ್ಚ್ ಅಂತ್ಯಕ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾಮಗಾರಿ ಪೂರ್ಣ

» **ಮೊದಲನೇ ಪುಟದಿಂದ**

**ಮೊರಾರ್ಜಿ ದೇಸಾಯಿ ಶಾಲೆಗೆ ಬೇಡಿಕೆ**

ತಾಲ್ಲೂಕಿನ ಸಾಲಗಾಮೆ ಹೋಬಳಿ ನಿಟ್ಟೂರಿನಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಆರಂಭಕ್ಕೆ ಶಾಸಕರು ಕೋರಿದರು. ಅದಕ್ಕೆ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಉತ್ತರಿಸಿ, ಗುಡ್ಡೇನಹಳ್ಳಿಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜು ಹಾಗು ಯಗಚಿಯಲ್ಲಿ ಮೊರಾರ್ಜಿ ವಸತಿ ಶಾಲೆ ಇದೆ. ಪ್ರತಿ ಹೋಬಳಿಗೆ ಒಂದು ವಸತಿ ಶಾಲೆ ನಿರ್ಮಾಣಮಾಡಬೇಕೆಂಬ ಧ್ಯೇಯೋದ್ದೇಶ ಸರ್ಕಾರದ ಮುಂದಿದೆ. ಅದರಂತೆ ರೆಸಿಡೆನ್ಸಿ ಶಾಲೆ ಇಲ್ಲದ ಹೋಬಳಿಗಳಲ್ಲಿ ಆರಂಭಿಸಲು ಆದ್ಯತೆ ಮೇರೆಗೆ ಹಂತ ಹಂತವಾಗಿ ಗಮನ ಹರಿಸಲಾಗುವುದೆಂದು ಸಚಿವರು ತಿಳಿಸಿದರು.

## ಪ್ರತ್ಯೇಕ ಅಪಘಾತ: ಇಬ್ಬರ ಸಾವು

**ಬೇಲೂರು:** ಗೂಡ್ಸ್ ವಾಹನ ಹಾಗು ಕಾರು ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಕಾರು ಚಾಲಕ ಮೃತಪಟ್ಟಿರುವ ಘಟನೆ ಚಿಕ್ಕಮಗಳೂರು-ಬೇಲೂರು ಮಾರ್ಗಮಧ್ಯೆ ಕೊರಟಗೆರೆ ಸಮೀಪ ನಡೆದಿದೆ.

ಬೆಂಗಳೂರಿನ ರಾಜಾಜಿ ನಗರ ನಿವಾಸಿ ಶಿವಕುಮಾರ್ (65) ಮೃತರು. ಪಟ್ಟಣದ ಮೊಹಮ್ಮದ್ ಮುಬಾರಕ್ ಅವರು ತಮ್ಮ ಗೂಡ್ಸ್ ವಾಹನದಲ್ಲಿ ಶುಂಠಿ ಲೋಡ್ ಮಾಡಿಕೊಂಡು ಬೆಳಗಾವಿಗೆ ತೆರಳುತ್ತಿದ್ದರು. ಗುರುವಾರ ರಾತ್ರಿ 8ರ ಸಮಯದಲ್ಲಿ ಕೊರಟಗೆರೆ ಸಮೀಪ ಹೋಗುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಶಿವಕುಮಾರ್ ಅವರ ಕಾರು ಡಿಕ್ಕಿಯಾಗಿದೆ ಎನ್ನಲಾಗಿದೆ. ತಕ್ಷಣವೇ ಕೆಳಗಿಳಿದು ನೋಡಿದಾಗ ಶಿವ ಕುಮಾರ್ ಅವರ ಹಣೆ ಹಾಗು ಮೈಕೈಗೆ ಬಲವಾದ ಪೆಟ್ಟಾಗಿತ್ತು. ಅವರನ್ನು ಹಿಮ್ಸ್‌ಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ವೇಗದ ಚಾಲನೆಯಿಂದ ನಿಯಂತ್ರಣ ತಪ್ಪಿ ಬೈಕ್ ಮೇಲಿಂದ ಬಿದ್ದ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬೇಲೂರು-ಚನ್ನಾಪುರ ಮಾರ್ಗದಲ್ಲಿ ನಡೆ ದಿದೆ. ಬಾಣದಹಳ್ಳಿ ಗ್ರಾಮದ ಮಲ್ಲಿಕಾರ್ಜುನ ಮೃತರು. ಗುರುವಾರ ರಾತ್ರಿ 9.30ರ ಸಮಯ ದಲ್ಲಿ ಬೈಕ್ ರಿಪೇರಿ ಮಾಡಿಸಿಕೊಂಡು ಊರಿಗೆ ವಾಪಾಸ್ಸಾಗುತ್ತಿದ್ದಾಗ ರಸ್ತೆ ತಿರುವಿನಲ್ಲಿ ನಿಯಂತ್ರ ಣಕ್ಕೆ ಸಿಗದೆ ಬಿದ್ದು ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅರಕೆರೆ ದೇವಾಲಯದಲ್ಲಿ ಕಳವು

**ಅರಸೀಕೆರೆ:** ದೇವಸ್ಥಾನದ ಬೀಗ ಮುರಿದು ದೇವರ ಮೂರ್ತಿಗೆ ಹಾಕಿದ್ದ 30 ಸಾವಿರ ರೂ. ಮೌಲ್ಯದ ಬೆಳ್ಳಿ ಆಭರಣ ಕಳವು ಮಾಡಿರುವ ಘಟನೆ ಜಾವಗಲ್ ಹೋಬಳಿ ಅರಕೆರೆ ಗ್ರಾಮದಲ್ಲಿ ನಡೆದಿದೆ.

ಜ.28ರ ರಾತ್ರಿ ಆಂಜನೇಯ ಸ್ವಾಮಿ ದೇಗುಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು ಸ್ವಾಮಿಗೆ ಹಾಕಿದ್ದ ಬೆಳ್ಳಿ ಮುಖವಾಡ, ಹಸ್ತ, ಎರಡು ಪಾದ, ಬೆಳ್ಳಿ ಛತ್ರಿ ಹಾಗು ಪಕ್ಕದ ಏಳು ಕೋಟಿ ಕರಿಯಮ್ಮದೇವಿ ದೇವಸ್ಥಾನ ಹಾಗು ಚಿಕ್ಕಮ್ಮ ದೇವಿ ದೇವಸ್ಥಾನದಲ್ಲೂ ಬೆಳ್ಳಿ ಆಭರಣ ಕದ್ದಿದ್ದಾರೆ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಲ್ಯಾಂಡ್ ಲಾರ್ಡ್ ಸಿನಿಮಾ ವೀಕ್ಷಣೆಗೆ ದಲಿತ ಮುಖಂಡರ ಮನವಿ

• ಪ್ರಜೋದಯ ವರದಿ

**ಹಾಸನ:** ತಳ ಸಮುದಾಯಗಳು ಅನುಭವಿಸುತ್ತಿರುವ ನೋವು, ಶೋಷಣೆ ಹಾಗು ಸಾಮಾ ಜಿಕ ಅಸಮಾನತೆಯನ್ನು ಪ್ರತಿಬಿಂಬಿಸುವ ಲ್ಯಾಂಡ್ ಲಾರ್ಡ್ ಸಿನಿಮಾವನ್ನು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಿಸಿ ಗೆಲ್ಲಿಸಬೇಕು. ಅದೇ ರೀತಿ ಈ ಸಿನಿಮಾಗೆ ಸರ್ಕಾರ ಶೇ.100 ತೆರಿಗೆ ವಿನಾಯಿತಿ ನೀಡಬೇಕೆಂದು ದಲಿತ ಸಂಘಟನೆಗಳ ಸಮನ್ವಯ ಸಮಿತಿ ಅಧ್ಯಕ್ಷ ಕೃಷ್ಣದಾಸ್ ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಜಡೇಶ್ ಕೆ. ಹಂಪಿ ನಿರ್ದೇಶನದ ಈ ಚಿತ್ರಕ್ಕೆ ರಾಜ್ಯಾದ್ಯಂತ ಮೆಚ್ಚುಗೆ ವ್ಯಕ್ತವಾಗುತ್ತಿದೆ. ದುನಿಯಾ ವಿಜಯ್, ರಾಜ್ ಬಿ.ಶೆಟ್ಟಿ, ರಚಿತಾ ರಾಮ್ ಮನೋಜ್ಞವಾಗಿ ನಟಿಸಿದ್ದಾರೆ. ಸಿನಿಮಾ ಪ್ರೇಮಿಗಳು ಚಿತ್ರದ ಕಥೆ, ಸಂಭಾಷಣೆ, ಹಾಡು ಹಾಗು ಸಂದೇಶವನ್ನು ಮೆಚ್ಚಿದ್ದಾರೆ. ಇಂತಹ ಧೈರ್ಯಶಾಲಿ ಕಥಾವಸ್ತುವನ್ನು ಆಯ್ದು ಕೊಂಡು ಸಿನಿಮಾ ನಿರ್ಮಿಸಿರುವುದು ಹೆಗ್ಗಳಿಕೆಯೆಂದರು.

ಈ ಚಿತ್ರವನ್ನು ಯಾವುದೇ ಒಂದು ಜಾತಿಗೆ ಸೀಮಿತಗೊಳಿಸದೆ ಸಮಾಜದ ಎಲ್ಲಾ ಶೋಷಿತ ವರ್ಗಗಳ ಬದುಕಿನ ಪ್ರತಿನಿಧಿಯಾಗಿ ರೂಪಿಸಲಾಗಿದೆ.




ಶತಮಾನಗಳ ಹಿಂಸೆ, ದೌರ್ಜನ್ಯ, ಅನ್ಯಾಯ ಅನುಭವಿಸುತ್ತಾ ಬಂದ ತಳ ಸಮುದಾಯಗಳ ನೋವುಗಳನ್ನು ಸಂವೇದನಾಶೀಲ ವಾಗಿ ಚಿತ್ರಿಸಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ದೊರೆತು 79 ವರ್ಷ, ಸಂವಿಧಾನ ಜಾರಿಯಾಗಿ 76 ವರ್ಷ ಕಳೆದರೂ ತಳ ಸಮುದಾಯಗಳ ಬದುಕು ಇನ್ನೂ ಅಸಹನೀಯವಾಗಿದೆ. ಜಾತಿ ಆಧಾರಿತ ಹಲ್ಲೆ, ದೌರ್ಜನ್ಯ ಹಾಗು ಕೊಲೆಗಳು ನಿರಂತರವಾಗಿ ನಡೆಯುತ್ತಿವೆ ವಿಷಾದಿಸಿದರು.

ಚಲನಚಿತ್ರವು ಹಿಂಸೆಯಿಂದ ಅಹಿಂಸೆಯ ಕಡೆಗೆ ಸಮಾಜವನ್ನು ಕರೆದೊಯ್ಯುವ ಸಂದೇಶ ಹೊಂದಿದೆ. ಪ್ರತಿಯೊಬ್ಬ ನಾಗರಿಕನಿಗೂ ಸಂವಿಧಾನ ನೀಡಿರುವ ಸಮಾನ ಹಕ್ಕು ಮತ್ತು ಅವಕಾಶಗಳು ದೊರಕಬೇಕೆಂದು ಬಲವಾಗಿ ಪ್ರತಿಪಾದಿಸುತ್ತದೆ. ಜೊತೆಗೆ, ಜನಸಂಖ್ಯೆಯ ಅರ್ಧದಷ್ಟು ಇರುವ ಮಹಿಳೆಯರಿಗೆ ಇನ್ನೂ ಸಮಾನ ಹಕ್ಕುಗಳು ಸಿಗದಿರುವ ವಾಸ್ತವವನ್ನು ತೆರೆದಿಟ್ಟಿದೆ. ಮಹಿಳೆಯರ ಸಬಲೀಕರಣ ಹಾಗು ಶೋಷಿತ ವರ್ಗಗಳ ವಿಮೋಚನೆಗೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಹೇಳಿದಂತೆ ಶಿಕ್ಷಣವೇ ಏಕೈಕ ದಾರಿ ಎಂಬ ಸಂದೇಶವನ್ನು ವಿಭಿನ್ನ ಹಾಗೂ ಪ್ರಭಾವಶಾಲಿ ರೀತಿಯಲ್ಲಿ ಚಿತ್ರಿಸಲಾಗಿದೆ ಎಂದರು.

ಚಿತ್ರದ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ದಲಿತ ಸಂಘಟನೆಗಳ ಸಮನ್ವಯ ಸಮಿತಿ ವತಿಯಿಂದ ಜಿಲ್ಲಾದ್ಯಂತ ಜನ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದರು.

ಹಿಂದುಳಿದ ವರ್ಗಗಳ ಒಕ್ಕೂಟದ ಸಣ್ಣೇಗೌಡ, ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಈರೇಶ್ ಹಿರೇಹಳ್ಳಿ, ಜಾಗೃತ ಅಲೆಮಾರಿ ಸಮುದಾಯಗಳ ರಾಜ್ಯ ಒಕ್ಕೂಟದ ರಾಜ್ಯಾಧ್ಯಕ್ಷ ಎಂ.ವಿ. ಗೋವಿಂದರಾಜು, ಮಣಚನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಗುಡ್ಡೇನಹಳ್ಳಿ ರಂಗಸ್ವಾಮಿ, ಪೌರ ಕಾರ್ಮಿಕ ಮುಖಂಡ ನಲ್ಲಪ್ಪ ಇದ್ದರು.

## ಆರು ತಿಂಗಳಾದರೂ ಪಾವತಿಯಾಗದ ಶೌಚಾಲಯ ಹಣ

• ಪ್ರಜೋದಯ ವರದಿ

**ಹಾಸನ:** ಸ್ವಚ್ಛ ಭಾರತ ಅಭಿಯಾನ ಯೋಜನೆಯಡಿ ವೈಯಕ್ತಿಕ ಶೌಚಾಲಯ ನಿರ್ಮಿಸಿ ಆರು ತಿಂಗಳು ಕಳೆದರೂ ಹಣ ಪಾವತಿಯಾಗಿಲ್ಲ. ಜಿಲ್ಲಾಡಳಿತ ಸಮಸ್ಯೆಗೆ ಶೀಘ್ರ ಪರಿಹಾರ ಕಲ್ಪಿಸಬೇಕೆಂದು ಅರಸೀಕೆರೆಯ 24 ಫಲಾನುಭವಿಗಳು ಜಿಲ್ಲಾಡಳಿತಕ್ಕೆ ಶುಕ್ರವಾರ ಮನವಿ ಸಲ್ಲಿಸಿದರು.

ಸರ್ಕಾರದ ಸೂಚನೆ ಮತ್ತು ಅಧಿಕಾರಿಗಳ ಸಲಹೆಯಂತೆ ಸಹಾಯಧನ ಬರುತ್ತದೆಂದು ಸ್ವಂತ ಹಣ ತೊಡಗಿಸಿ ಶೌಚಾಲಯ ನಿರ್ಮಿಸಿದ್ದೇವೆ. ಅದಕ್ಕೆ ಸಂಬಂಧಿಸಿದ ಜಿಪಿಎಸ್ ಫೋಟೊ, ಅಗತ್ಯ ದಾಖಲೆಗಳನ್ನು ಸಲ್ಲಿಸಲಾಗಿದೆ. ಆದರೆ ಹಣ ಪಾವತಿಯಾಗಿಲ್ಲ. ಈ ಸಂಬಂಧ ನಗರಸಭೆ ಅಧಿಕಾರಿಗಳನ್ನು ಪ್ರಶ್ನಿಸಿದರೆ ಜಿಲ್ಲಾಧಿಕಾರಿ ಅವರನ್ನೇ ಭೇಟಿಯಾಗಿ ಎನ್ನುತ್ತಾರೆ. ಶೌಚಾಲಯ ನಿರ್ಮಾಣಕ್ಕೆ ಸಲಹೆ ನೀಡಿದ ಅಧಿಕಾರಿಗಳು ಈಗ ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲವೆಂದು ಆರೋಪಿಸಿದರು.

ಶೌಚಾಲಯ ನಿರ್ಮಾಣಕ್ಕೆ ಕೇಂದ್ರ ಹಾಗು ರಾಜ್ಯ ಸರ್ಕಾರಗಳಿಂದ ಬರಬೇಕಾದ ಅನುದಾನ ಕಡಿತಗೊಳಿಸಿ,




ಅತಿ ಕಡಿಮೆ ಪ್ರಮಾಣದ ಹಣವನ್ನು ಮಾತ್ರ ಫಲಾನುಭವಿಗಳಿಗೆ ನೀಡಲು ಕೆಲ ಅಧಿಕಾರಿಗಳು ಮುಂದಾಗಿದ್ದಾರೆ. ಈ ಬಗ್ಗೆ ಸ್ಥಳೀಯವಾಗಿ ಚರ್ಚೆ ನಡೆಯುತ್ತಿದೆ. ಅಧಿಕಾರಿಗಳು ಈ ಯೋಜನೆಯಲ್ಲೂ ಲೂಟಿ ಹೊಡೆಯಲು ಮುಂದಾಗಿದ್ದಾರೆಂಬ ಅನುಮಾನ ಕಾಡುತ್ತಿದೆಂದು ಆತಂಕ ವ್ಯಕ್ತಪಡಿಸಿದರು.

ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಕುಟುಂಬಗಳಿಗೆ ಸಾವಿರಾರು ರೂಪಾಯಿ ಸಾಲವಾಗಿದೆ. ಹಣ ಪಾವತಿಯಾಗದ ಕಾರಣ ಸಾಲದ ಬಡ್ಡಿ, ಮನೆ ಖರ್ಚು ಮತ್ತು ಜೀವನ ನಿರ್ವಹಣೆ ಕಷ್ಟವಾಗಿದೆ. ಸರ್ಕಾರದ ಮಾತು ನಂಬಿ ಶೌಚಾಲಯ ಕಟ್ಟಿದ್ದೇವೆ. ಆದರೆ ಹಣ ಕೊಡದೆ ಮೋಸ ಮಾಡುತ್ತಿದ್ದಾರೆಂದು ಫಲಾನುಭವಿಗಳು ಬೇಸರ ವ್ಯಕ್ತಪಡಿಸಿದರು.

ಸ್ವಚ್ಛತೆ ಮತ್ತು ಆರೋಗ್ಯದ ಹೆಸರಿನಲ್ಲಿ ಜನರನ್ನು ಪ್ರೋತ್ಸಾಹಿಸುವ ಸರ್ಕಾರ, ಹಣ ಪಾವತಿ ಯಲ್ಲಿ ವಿಳಂಬ ಮಾಡುವುದರಿಂದ ಯೋಜನೆಗಳ ಮೇಲಿನ ಜನರ ನಂಬಿಕೆ ಕುಸಿಯುತ್ತಿದೆ. ಇಂತಹ ನಿರ್ಲಕ್ಷ್ಯ ಮುಂದುವರೆದರೆ ಭವಿಷ್ಯದಲ್ಲಿ ಯಾವುದೇ ಸರ್ಕಾರಿ ಯೋಜನೆಗಳಿಗೆ ಜನರು ಮುಂದೆ ಬರದ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಎಚ್ಚರಿಸಿದರು.

ಅರಸೀಕೆರೆ ನಗರಸಭೆ ಮಾಜಿ ಸದಸ್ಯ ಇಮ್ರಾನ್ ಖಾನ್, ಕಮಿಲ್ ಉಲ್ಲಾ, ಪಾಷಾ, ರೂಪ, ಶಾಹಿನಾ ಬೇಗಂ, ಕಲೀಂ, ಜಬೀನಾ ಮತ್ತಿತರರಿದ್ದರು.

## ಸಕಲೇಶಪುರದಲ್ಲಿ ಭೂಕುಸಿತ ಸಂಬಂಧಿತ ಅಣಕು ಪ್ರದರ್ಶನ

• ಪ್ರಜೋದಯ ವರದಿ

**ಸಕಲೇಶಪುರ:** ವಿಪತ್ತು ಸಂದರ್ಭದಲ್ಲಿ ಸಮುದಾಯದಲ್ಲಿ ಜಾಗೃತಿ ಮೂಡಿಸಿ, ತುರ್ತು ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸುವ ಉದ್ದೇಶದಿಂದ ನಿಯಮಿತವಾಗಿ ಅಣಕು ಪ್ರದರ್ಶನ ನಡೆಸುವುದು ಅಗತ್ಯವಿದೆ ಎಂದು ಎನ್‌ಡಿಆರ್‌ಎಫ್ ಬಟಾಲಿಯನ್ ಕಮಾಂಡರ್ ಹರಿಶ್ ಚಂದ್ರ ಪಾಂಡೆ ಅವರು ಹೇಳಿದರು.

ಪಟ್ಟಣದ ಅಚೀವರ್ಸ್ ಕಾಲೇಜು ಸಮೀಪ ಭೂಕುಸಿತ (ಲ್ಯಾಂಡ್ ಸ್ಲೈಡ್) ಸಂಬಂಧಿತ ಅಣಕು ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಮಾಕ್‌ಡ್ರಿಲ್‌ನಲ್ಲಿ ಎನ್‌ಡಿಆರ್‌ಎಫ್ ಹಾಗೂ ಜಿಲ್ಲಾ ಆಡಳಿತದ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದು, ನಮ್ಮ ಸನ್ನದ್ಧತೆಯನ್ನು ಪರಿಶೀಲಿಸುವುದೇ ಇದರ ಮುಖ್ಯ ಉದ್ದೇಶವಾಗಿದೆ ಎಂದರು.

ಸಕಲೇಶಪುರದಲ್ಲಿ ಭೂಕುಸಿತ ಸಂಭವಿಸುವ ಸಾಧ್ಯತೆ ಹೆಚ್ಚಿರುವ



ಹಿನ್ನಲೆ ಇಂತಹ ಅಭ್ಯಾಸ ಗಳು ಅತ್ಯಂತ ಮಹತ್ವದ್ದಾಗಿವೆ. ಭೂಕುಸಿತದಂತಹ ತುರ್ತು ಪರಿಸ್ಥಿತಿಯಲ್ಲಿ ವಿವಿಧ ಇಲಾಖೆ ಗಳು ಸಮನ್ವಯತೆಯಿಂದ ಹೇಗೆ ಕಾರ್ಯನಿರ್ವಹಿಸಬೇಕು, ಯಾವ ಅಧಿಕಾರಿಗೆ ಯಾವ ಜವಾಬ್ದಾರಿ ಎಂಬುದನ್ನು ಮಾಕ್ ಡ್ರಿಲ್ ಮೂಲಕ ತಿಳಿಸಲಾಗುತ್ತದೆ ಎಂದರು.

ಜಿಲ್ಲಾಡಳಿತದ ನೇತೃತ್ವದಲ್ಲಿ ಅಣಕು ಪ್ರದರ್ಶನ ನಡೆಸಲಾಗಿದ್ದು, ಅಗ್ನಿಶಾಮಕ ದಳ, ಪೊಲೀಸ್ ಇಲಾಖೆ, ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್, ಆರೋಗ್ಯ ಇಲಾಖೆ, ತಾಲ್ಲೂಕು ಆಡಳಿತದ ಅಧಿಕಾರಿಗಳು ಪಾಲ್ಗೊಂಡಿದ್ದರು.

ಅಗತ್ಯ ಉಪಕರಣಗಳ ಕಾರ್ಯಕ್ಷಮತೆ, ಸ್ಪಂದನೆಗೆ ಬೇಕಾದ ಸಮಯ ಹಾಗೂ ತುರ್ತು ಸಂದರ್ಭದಲ್ಲಿನ ಕಾರ್ಯವಿಧಾನಗಳನ್ನು ಪರೀಕ್ಷಿಸಲಾಗಿದೆ. ಮಾಕ್‌ಡ್ರಿಲ್ ಯಶಸ್ವಿಯಾಗಿನಡೆಸಲಾಗಿದೆಂದು ತಿಳಿಸಿದರು.

ಕಮಾಂಡರ್ ಶಂಕರ್ ದುಡ್ವಾಲ್ ಅವರು ಮಾತನಾಡಿ, ಸಕಲೇಶಪುರದಲ್ಲಿ ನಡೆದ ಈ ಲ್ಯಾಂಡ್‌ಸ್ಲೈಡ್ ಮಾಕ್ ಡ್ರಿಲ್‌ನಲ್ಲಿ ಜಿಲ್ಲಾಡಳಿತ, ತಾಲ್ಲೂಕು ಆಡಳಿತ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಹಾಗೂ ಅಗ್ನಿಶಾಮಕ ದಳದ ತಂಡಗಳು ಭಾಗವಹಿಸಿದ್ದವು ಎಂದರು.

ಭೂಕುಸಿತ ಸಂಭವಿಸಿದ ಸಂದರ್ಭದಲ್ಲಿ ಯಾವ ಇಲಾಖೆ ಯಾವ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕು, ಅಧಿಕಾರಿಗಳ ಜವಾಬ್ದಾರಿ ಏನು, ಉಪಕರಣಗಳ ಬಳಕೆ ಹಾಗೂ ಸ್ಪಂದನೆ ಸಮಯವನ್ನು ಹೇಗೆ ಸುಧಾರಿಸಬೇಕೆಂಬ ಎಲ್ಲಾ ಅಂಶಗಳನ್ನು ಈ ಅಣಕು ಪ್ರದರ್ಶನದ ಮೂಲಕ ಪರಿಣಾಮಕಾರಿಯಾಗಿ ತೋರಿಸಲಾಗಿದೆ. ಎಲ್ಲರೂ ಉತ್ತಮ ಸಹಕಾರ ನೀಡಿದ್ದು, ಮಾಕ್‌ಡ್ರಿಲ್ ಯಶಸ್ವಿಯಾಗಿ ಮುಕ್ತಾಯಗೊಂಡಿದೆ ಎಂದು ಹೇಳಿದರು.

ಈ ವೇಳೆ ಕ್ರಾಫರ್ಡ್ ಆಸ್ಪತ್ರೆಯ ಹಿರಿಯ ಶಶ್ರೂಕಿ ನಿಶಾ ಅವರು, ಇತ್ತೀಚಿನ ದಿನಗಳಲ್ಲಿ ಹಿರಿಯರಿಂದ ಹಿರಿಯರಿಗೆ ಸಂಭವಿಸುತ್ತಿರುವ ಹೃದಯಘಾತ ಸಂದರ್ಭಗಳಲ್ಲಿ ಅಗತ್ಯವಿರುವ ಪ್ರಥಮ ಚಿಕಿತ್ಸೆಯ ಬಗ್ಗೆ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಕಂದಾಯ ಇಲಾಖೆಯ ಸಿರಸ್ತೇದಾರ್ ರವಿಕುಮಾರ್, ಕಂದಾಯ ಅಧಿಕಾರಿ ಧ್ಯಾನ್ ಪ್ರಕಾಶ್, ಗ್ರಾಮಾಧಿಕಾರಿ ಚಂದ್ರಹಾಸ್ಯ, ಸಬ್ ಇನ್ಸ್‌ಪೆಕ್ಟರ್ ಮಹೇಶ್, ತಾಲ್ಲೂಕು ವೈದ್ಯಾಧಿಕಾರಿ ಡಾ.ಮಹೇಶ್, ಶಿಕ್ಷಕ ಕೀರ್ತಿ ಕುಮಾರ್ ಉಪಸ್ಥಿತರಿದ್ದರು.

## ಸಂಚಾರ ಪೊಲೀಸರಿಂದ ರಸ್ತೆ ಸುರಕ್ಷತಾ ಅರಿವು




• ಪ್ರಜೋದಯ ವರದಿ

**ಹಾಸನ:** ನಗರದ ಮಲ್ನಾಡ್ ಹಿಪ್ಪೋ ಕ್ಯಾಂಪಸ್ ಇಂಟರ್ ನ್ಯಾಷನಲ್ ಶಾಲೆ ಹಾಗು ಸಂಚಾರ ಪೊಲೀಸರಿಂದ ರಸ್ತೆ ಸುರಕ್ಷತೆ ಮಾಸಾಚರಣೆ ಅಂಗವಾಗಿ ರಸ್ತೆ ಸುರಕ್ಷತೆ ಕುರಿತು ಅರಿವು ಕಾರ್ಯಕ್ರಮವನ್ನು ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು.

ಪಿಎಸ್‌ಐ ಶ್ರೀನಿವಾಸ್ ಅವರು ಮಾತನಾಡಿ, ರಸ್ತೆ ಸುರಕ್ಷತೆ ಮಹತ್ವ, ಸಂಚಾರ ನಿಯಮಗಳ ಪಾಲನೆ ಹಾಗು ಕಾನೂನು ಅರಿವಿನ ಬಗ್ಗೆ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ರಸ್ತೆ ಅಪಘಾತ ತಡೆಯಲು ಎಲ್ಲರೂ ಜವಾಬ್ದಾರಿಯಿಂದ ವರ್ತಿಸಬೇಕೆಂದು ಕರೆ ನೀಡಿದರು.

ಶಾಲೆಯ ವಿದ್ಯಾರ್ಥಿಗಳು ಅಣುಕು ನಾಟಕದ ಮೂಲಕ ಸಂಚಾರ ಸೂಚನೆಗಳನ್ನು ಹೇಗೆ ಪಾಲಿಸಬೇಕು ಹಾಗು ಜವಾಬ್ದಾರಿಯುತ ನಾಗರಿಕರಾಗಿ ಹೇಗೆ ವರ್ತಿಸಬೇಕೆಂದ ಸಂದೇಶ ಸಾರಿದರು.

ಶಾಲೆಯವಿದ್ಯಾರ್ಥಿಗಳು ಸಂಚಾರ ಪೊಲೀಸರ ಸಹಕಾರದೊಂದಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ರಸ್ತೆ ಸುರಕ್ಷತೆ ಕುರಿತು ಜಾಗೃತಿ ಜಾಥಾ ನಡೆಸಿ ಅರಿವು ಮೂಡಿಸಿದರು.

## ರಣಜಿ: ಇನ್ನಿಂಗ್ಸ್ ಹಿನ್ನಡೆಯ ಆತಂಕದಲ್ಲಿ ಕರ್ನಾಟಕ

• ಪ್ರಜೋದಯ ವರದಿ

**ಮೊಹಾಲಿ:** ನಾಯಕ ದೇವದತ್ತ ಪಡಿಕ್ಕಲ್ ಸೇರಿ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯವು ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಕಾಡಿತು. ಅದರಿಂದಾಗಿ ಪಂಜಾಬ್ ಎದುರು ಮೊದಲ ಇನಿಂಗ್ಸ್ ಮುನ್ನಡೆಗಾಗಿ ತಂಡವು ಕಠಿಣ ಹೋರಾಟ ನಡೆಸುವಂತಾಗಿದೆ.

ಪಂಜಾಬ್ ತಂಡವು ಗಳಿಸಿರುವ 309 ರನ್‌ಗಳಿಗೆ ಉತ್ತರವಾಗಿ 2ನೇ ದಿನದಾಟದ ಮುಕ್ತಾಯಕ್ಕೆ ಕರ್ನಾಟಕವು 87 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 255 ರನ್ ಗಳಿಸಿದೆ. ಇನಿಂಗ್ಸ್ ಮುನ್ನಡೆಗೆ ಇನ್ನೂ 54 ರನ್‌ಗಳು ಬೇಕು.

ಸ್ಪಿನ್ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ (ಬ್ಯಾಟಿಂಗ್42ರನ್, 124 ಎಸೆತ, 3ಬೌಂಡರಿ) ಮಧ್ಯಮವೇಗಿ ಆಲ್‌ರೌಂಡರ್ ವಿದ್ಯಾಧರ್ ಪಾಟೀಲ (ಬ್ಯಾಟಿಂಗ್ 23ರನ್, 56 ಎಸೆತ, 4ಬೌಂಡರಿ) ಕ್ರೀಸ್‌ನಲ್ಲಿದ್ದಾರೆ. ಅವರಿಬ್ಬರ ಮೇಲೆಯೇ ಈಗ ಕರ್ನಾಟಕ ತಂಡಕ್ಕೆ ಇನಿಂಗ್ಸ್ ಮುನ್ನಡೆ ಕೊಡಿಸುವ ಹೊಣೆ ಇದೆ. ಈ ಪಂದ್ಯದಲ್ಲಿ ಪೂರ್ಣ ಅಂಕಗಳೊಂದಿಗೆ ಗೆದ್ದರೆ ಮಾತ್ರ ಕರ್ನಾಟಕ ತಂಡಕ್ಕೆ ನಾಕೌಟ್ ಪ್ರವೇಶಿ



ಸುವ ಅವಕಾಶ ಸಿಗಬಹುದು.

ಆರಂಭಿಕ ಜೋಡಿ ಕೆ.ಎಲ್. ರಾಹುಲ್ (59ರನ್, 87ಎಸೆತ, 9 ಬೌಂಡರಿ) ಮತ್ತು ಮಯಂಕ್ ಅಗರವಾಲ್ (46ರನ್, 64 ಎಸೆತ, 6 ಬೌಂಡರಿ) ಮೊದಲ ವಿಕೆಟ್ ಜೊತೆಯಾಟದಲ್ಲಿ 102 ರನ್ ಸೇರಿಸಿದರು. ಈ ಉತ್ತಮ ಅಡಿಪಾಯದ ಮೇಲೆ ಚೆಂದದ ಇನಿಂಗ್ಸ್ ಕಟ್ಟುವ ಅವಕಾಶವನ್ನು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಕೈಚೆಲ್ಲಿದರು. ಎಡಗೈ ಸ್ಪಿನ್ನರ್ ಹರಪ್ರೀತ್ ಬ್ರಾರ್ (101ಕ್ಕೆ4) ಅವರ ಮೋಡಿಗೆ ವಿಕೆಟ್ ಪತನವಾದವು.

ಮೊದಲ ದಿನದಾಟದಲ್ಲಿ ಪಂಜಾಬ್ ತಂಡವು 8 ವಿಕೆಟ್‌ಗಳಿಗೆ 303 ರನ್ ಗಳಿಸಿತ್ತು. ಅರ್ಧಶತಕ ಗಳಿಸಿದ್ದ ಇಮಾನ್ಜೋತ್ ಸಿಂಗ್ (83) ಹಾಗೂ ಸುಖದೀಪ್ ಭಜ್ವಾ (20ರನ್) ಕ್ರೀಸ್‌ನಲ್ಲಿದ್ದರು. ಶುಕ್ರವಾರ ಬೆಳಿಗ್ಗೆ ಈ ಮೊತ್ತಕ್ಕೆ ಕೇವಲ ಆರು ರನ್ ಸೇರಿಸಿದ ಬ್ಯಾಟರ್‌ಗಳು ಔಟಾದರು. ವಿದ್ಯಾಧರ್ ಪಾಟೀಲ ಅವರು ಇಮಾನ್ಜೋತ್ ಅವರನ್ನು ಔಟ್ ಮಾಡಿದರೆ, ಪ್ರಸಿದ್ಧ ಕೃಷ್ಣ ಅವರು ಭಜ್ವಾ ವಿಕೆಟ್ ಪಡೆದರು.

ಭಾರತ ತಂಡದಲ್ಲಿ ಟೆಸ್ಟ್ ಕ್ರಿಕೆಟ್ ಪಂದ್ಯಗಳನ್ನು ಆಡಿರುವ ಅನುಭವಿ ಜೋಡಿ ರಾಹುಲ್ ಮತ್ತು ಮಯಂಕ್ ಕರ್ನಾಟಕ ತಂಡಕ್ಕೆ ಅಮೋಘ ಆರಂಭ ನೀಡಿದರು.

ಆದರೆ 22ನೇ ಓವರ್‌ನಲ್ಲಿ ಚಾಹಲ್ ಅವರು ಮಯಂಕ್ ವಿಕೆಟ್ ಗಳಿಸುವ ಮೂಲಕ ಜೊತೆಯಾಟ ಮುರಿದರು. ಐದು ಓವರ್‌ಗಳ ನಂತರ ಬ್ರಾರ್ ಬೌಲಿಂಗ್‌ನಲ್ಲಿ ರಾಹುಲ್ ಕ್ಲೀನ್‌ಬೌಲ್ಡ್ ಆದರು. ಕಳೆದ ಪಂದ್ಯದಲ್ಲಿ ಚೆಂದದ ಬ್ಯಾಟಿಂಗ್ ಮಾಡಿದ್ದ ಕೆ.ವಿ.ಅನೀಶ್ (32ರನ್, 75ಎಸೆತ, 3ಬೌಂಡರಿ) ಇಲ್ಲಿಯೂ ಭರವಸೆ ಮೂಡಿಸಿದ್ದರು. ಆದರೆ ದೇವದತ್ತ ಮತ್ತು ಸ್ಮರಣ್ ರವಿಚಂದ್ರನ್ ತಲಾ 9 ರನ್ ಗಳಿಸಿದರು. ಇಬ್ಬರ ವಿಕೆಟ್ ಕೂಡ ಬ್ರಾರ್ ಖಾತೆ ಸೇರಿದವು. 48ನೇ ಓವರ್‌ನಲ್ಲಿ ಅನೀಶ್ ವಿಕೆಟ್ ಕೂಡ ಬ್ರಾರ್ ಪಾಲಾಯಿತು.

### ಸಕಲೇಶಪುರದಲ್ಲಿ ಸವಿತಾ ಮಹರ್ಷಿ ಜಯಂತಿ

## ಸವಿತಾ ಸಮಾಜಕ್ಕೆ 2 ಸಾವಿರ ವರ್ಷಗಳ ಇತಿಹಾಸ

• ಪ್ರಜೋದಯ ವರದಿ

**ಸಕಲೇಶಪುರ:** ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಸವಿತಾ ಸಮಾಜ ತನ್ನ ಸೇವಾಕಾರ್ಯಗಳಿಂದಲೇ ಹೆಸರುವಾಸಿಯಾಗಿದೆ ಎಂದು ಉಪ ತಹಶೀಲ್ದಾರ್ ಮೋಹನ್ ಕುಮಾರ್ ಅವರು ಹೇಳಿದರು.

ತಾಲ್ಲೂಕು ಕಚೇರಿ ಆವರಣದಲ್ಲಿ ಆಯೋಜಿಸಿದ್ದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಸವಿತಾ ಸಮಾಜ ತನ್ನದೇ ಆದ ಪರಂಪರೆ ಮತ್ತು ಸಂಸ್ಕೃತಿಯನ್ನು ಹೊಂದಿದೆ. ಸವಿತಾ ಮಹರ್ಷಿಗಳು ಸಮಾಜದ ಮೂಲಪುರುಷರಾಗಿದ್ದು, ಸಮಾಜದವರು ಸಂಘಟಿತರಾದಾಗ ಮಾತ್ರ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸಮಾಜದ ಯುವ ಮುಖಂಡ ಕಾರ್ತಿಕ್ ಮಾತನಾಡಿ, ಬಿಹಾರದ ಮಾಜಿ ಮುಖ್ಯಮಂತ್ರಿ, ಕರ್ಪೂರಿ ಠಾಕೂರ್ ಅವರ ಜೀವನ ಸಾಧನೆಗಳ ಕುರಿತು ವಿವರಿಸಿದರು. ಅವರು ಕ್ರಿಕೆಟ್ ಟೆಸ್ಟ್ ಹಾಗೂ ಓಡಿ ಪಂದ್ಯಗಳಲ್ಲಿ ಭಾಗವಹಿಸಿದ್ದರೆಂಬುದರ ಜೊತೆಗೆ, 26



ತಿಂಗಳು ಕಾನೂನು ಸೆರೆ ಮನೆಯಲ್ಲಿ ವಾಸವಿದ್ದು, ನಂತರ 1967ರಲ್ಲಿ ಬಿಹಾರ ರಾಜ್ಯದ ಶಿಕ್ಷಣ ಸಚಿವರಾಗಿ ಹಾಗೂ 1976ರಲ್ಲಿ 2 ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಕರ್ಪೂರಿ ಠಾಕೂರ್ ನಮ್ಮ ಸಮಾಜದವರು ಎಂಬುದನ್ನು ಹೆಮ್ಮೆಯಿಂದ ಹೇಳಿಕೊಳ್ಳುವುದಾಗಿ ತಿಳಿಸಿದರು.

12ನೇ ಶತಮಾನದಿಂದಲೇ ಸವಿತಾ ಸಮಾಜ ಅಸ್ತಿತ್ವದಲ್ಲಿದ್ದು, ಆರ್ಥಿಕ ಹಾಗೂ ಶೈಕ್ಷಣಿಕ ಹಿಂದುಳಿತನದಿಂದ ಸಮಾಜದ ಅನೇಕ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಕಷ್ಟ ಅನುಭವಿಸುತ್ತಿದ್ದಾರೆ. ವೈದ್ಯಕೀಯ, ಕಾನೂನು ಹಾಗೂ ಇಂಜಿನೀಯರಿಂಗ್ ಶಿಕ್ಷಣ ಪಡೆಯಲು ಬಡ ಕುಟುಂಬದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ವಿದ್ಯಾರ್ಥಿವೇತನ ಹಾಗೂ ವಿದ್ಯಾರ್ಥಿ ಸಹಾಯಧನ ಒದಗಿಸಬೇಕೆಂದು ಮನವಿ ಮಾಡಿದರು.

ಸಮಾಜದ ಮುಖಂಡ ನಾದಸ್ವರ ಆನಂದ ಮಾತನಾಡಿ, ಸಮಾಜದ ಬಂಧುಗಳಿಗೆ ನ್ಯಾಯ ಒದಗಿಸುವುದು, ಹಿರಿಯ ಶ್ರಮಿಕರಿಗೆ ಸನ್ಮಾನ ನೀಡುವುದು, ಶೈಕ್ಷಣಿಕವಾಗಿ ಬಲ ತುಂಬುವುದು ಹಾಗೂ ಪರಿಶಿಷ್ಟ ಮೀಸಲಾತಿಯಲ್ಲಿ ಸವಿತಾ ಸಮಾಜವನ್ನು ಸೇರಿಸಬೇಕೆಂದು ಒತ್ತಾಯಿಸಿದರು. ಮುಂಬರುವ ರಾಷ್ಟ್ರೀಯ ಹಬ್ಬಗಳ ಸಮಿತಿ ಕಾರ್ಯಕ್ರಮಗಳಲ್ಲಿ 60 ವರ್ಷ ಮೇಲ್ಪಟ್ಟ ಶ್ರಮಿಕ ವೃತ್ತಿಯಲ್ಲಿ ತೊಡಗಿರುವ ಹಿರಿಯರಿಗೆ ಸನ್ಮಾನ ವ್ಯವಸ್ಥೆ ಮಾಡಬೇಕೆಂದು ಕೋರಿದರು.

ಶೈಕ್ಷಣಿಕ ಹಾಗೂ ಆರೋಗ್ಯ ಕ್ಷೇತ್ರದಲ್ಲಿಯೂ ಸಮಾಜ ಹಿಂದುಳಿದಿರುವುದರಿಂದ ಸರ್ಕಾರ ದಿಂದ ಅಗತ್ಯ ನೆರವು ದೊರಕಿಸಿಕೊಡಬೇಕೆಂದು ಮನವಿ ಮಾಡಿದರು. ಸವಿತಾ ಸಮಾಜವನ್ನು ಪರಿಶಿಷ್ಟ ವರ್ಗ ಅಥವಾ ಪರಿಶಿಷ್ಟ ಪಂಗಡ ಮೀಸಲಾತಿಗೆ ಸೇರಿಸುವಂತೆ ಸರ್ಕಾರವನ್ನು ಈ ಮೂಲಕ ಒತ್ತಾಯಿಸಿದರು.

ಚುನಾವಣಾ ಶಿರಸ್ತೇದಾರ್ ಶ್ವೇತ, ಸಮಾಜದ ಮುಖಂಡರಾದ ನಾಗರಾಜ್, ವಿನು, ಯೋಗೇಶ್, ಸೋಮಶೇಖರ್, ರಾಮು, ಶಬರಿ ಉಪಸ್ಥಿತರಿದ್ದರು.

## ಜಿಲ್ಲಾ ಕಾರಾಗೃಹದಲ್ಲಿ ಹುತಾತ್ಮರ ದಿನಾಚರಣೆ: ಶ್ರಮದಾನ

» **ಮೊದಲನೇ ಪುಟದಿಂದ**

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಎಂ. ಪುಟ್ಟಸ್ವಾಮಿ ಅವರು ಮಾತನಾಡಿ, ಬಂಧಿವಾಸಿಗಳಿಗೆ ಹಲವಾರು ಸುಧಾರಣಾ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಬಂಧಿಖಾನೆಗಳು ಶಿಕ್ಷಾ ಕೇಂದ್ರಗಳಾಗದೆ ಸುಧಾರಣೆ ಮಾಡುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿವೆ. ಅದರ ಉಪಯೋಗವನ್ನು ಬಂಧಿವಾಸಿಗಳೂ ಪಡೆದುಕೊಳ್ಳ ಬೇಕು. ಕೆಟ್ಟ ಘಳಿಗೆಯಲ್ಲಿ ಆಗಿರುವ ತಪ್ಪುಗಳನ್ನು ಮರೆತು ಹೊಸ ಜೀವನ ನಡೆಸಲು ಮುಂದಾಗಬೇಕೆಂದು ತಿಳಿಸಿದರು.

ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆ ಉಪನಿರ್ದೇಶಕ ಡಾ.ಆರ್.ವಿ.ಕೊಟ್ಟೂರ ಅವರು ಮಾತನಾಡಿ, ಹೈನುಗಾರಿಕೆ ಪದ್ಧತಿ ಯಿಂದ ಅಧಿಕ ಲಾಭ ಗಳಿಸಬಹುದು. ಈ ನಿಟ್ಟಿನಲ್ಲಿ ಚಿಂತನೆ ನಡೆಸ ಬೇಕೆಂದರು.

ಜಿಲ್ಲಾ ಕಾರಾಗೃಹ ಅಧೀಕ್ಷಕ ಆರ್. ಪ್ರಸನ್ನ ಅಧ್ಯಕ್ಷತೆ ವಹಿಸಿದ್ದರು. ಅನಿಲ್, ಪಶುವೈದ್ಯೆ ಡಾ||ಅಂಬುಜಾ ಇತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019